ಅಫಿಷಿಯೆಲ್ ಟ್ರಸ್ಟಿಯ ಕೈಯೆಲ್ಲಿರುವ ಭರವಸೆಯಾರೂಪವಾದ ಹಣಗಳು ಇಂಡಿಯಾ ಗವರ್ನ್‌ಮೆಂಟಿನ ವರ ಆದಾಯಗಳಿಂದ ಭದ್ರವಾಡಲ್ಪಟ್ಟಿವೆ--

ಅಫಿಷಿಯೆಲ್ ಟ್ರಸ್ಟಿಯ ಉದ್ಯೋಗವು ಅವಿರತವಾಗಿ ನಡೆಯುತ್ತಿದ್ದು ಒಂದು ಶಾಶ್ವತವಾದ ಇರುವಿಕೆಯನ್ನು ಹೊಂದಿರುತ್ತದೆ.

ಒಂದು ಟ್ರಸ್ಟ್ಯ ಅಫಿಷಿಯೆಲ್ ಟ್ರಸ್ಟಿಯಿಂದ ಒಂದಾವರ್ತಿ ಅಂಗೀಕರಿಸೋಣಾದರೆ ಸದರೀ ಟ್ರಸ್ಟ್ಯನ್ನು ಮತ್ತೊಬ್ಬ ಟ್ರಸ್ಟ್ಯಗೆ ಪರಭಾರೆಮಾಡುವ ಆವಶ್ಯಕತೆಯು ಎಂದಿಗೂ ಇರುವುದಿಲ್ಲ ಮತ್ತು ಎಂದಾದರೂ ಇತರ ಟ್ರಸ್ಟಿಯನ್ನು ಮೊಕರೂರುಮಾಡಬೇಕಾದ ಅಗತ್ಯವೇ ಇರುವುದಿಲ್ಲ.

ಅಫಿಷಿಯಲ್ ಟ್ರಸ್ಟಿಯ ಕೈಯಲ್ಲಿರುವ ಹಣಗಳು ಇಂಡಿಯದ ಟ್ರಸ್ಟುಗಳಿಕುರಿತ ಆಕ್ಟಿನ ನಿಬಂಧನೆಗಳಿಗನುಸಾರವಾಗಿ ಸಂಚಯಕ್ಕೆಡಲ್ಪಡುತ್ತವೆ ಮತ್ತು ಸ್ಥಿರಸ್ವತ್ತಿನ ಅಡುವಿನಮೇಲೆ ಹಣವನ್ನು ಸಂಚಯಕ್ಕೆಡುವುದು ಯೋಗ್ಯವಾದುದೆಂದು ಯೋಚಿಸಲ್ಪಟ್ಟಾಗ ಡೈಕೋರ್ಟಿನ ಮಂಜೂರಾತಿಯು ಮುಂದಾಗಿ ಪಡೆಯೋಣಾಗುತ್ತದೆ.

ಅಫಿಷಿಯಲ್ ಟ್ರಸ್ಟಿಯ ಲೆಕ್ಕಗಳು ಸರಿಯಾಗಿ ಇಡಲ್ಪಡುತ್ತವೆ ಮತ್ತು ಕ್ರಮವಾಗಿ ಗವರ್ನ್‌ಮೆಂಟ್ ಅಧಿಕಾರಗಳಿಂದ ಪರಿಶೋಧಿಸಲ್ಪಡುತ್ತವೆ.

ಅಫಿಷಿಯಲ್ ಟ್ರಸ್ಟಿಯು ಟ್ರಸ್ಟು ಸ್ವೆತ್ತಿನ ಜಿವ್ಮೆಯನ್ನು ತೆಗೆದುಕೊಳ್ಳುವಾಗ, ಜಾಗರೂಕತೆಯಾಗಿ ಒಂದು ಹಾಬಿತಾಟ್ಟಿಯು ತಯಾರಿಸಲ್ಪಡುತ್ತದೆ ಮತ್ತು ಅರ್ಹರಾದ ಮನುಷ್ಯರಿಂದ ಸಂದರ್ಶಿಸಲ್ಪಡುವಬಗ್ಗೆ ಯಾವಾಗಲೂ ದೊರೆಯುತ್ತದೆ. ಮತ್ತು ಮೂಲಧನದ ಮತ್ತು ಆದಾಯದ ಯಾವತ್ತು ಜಮೆಗಳು ಆಫೀಸಿನ ಪುಸ್ತಕಗಳಲ್ಲಿ ಸ್ಪಷ್ಟವಾಗಿ ತೋರಿಸಲ್ಪಡುತ್ತವೆ.

ಟ್ರಸ್ಟಿನ ಹಣಕ್ಕೆ ಅರ್ಹನಾದ ಯಾವನಾದರೂ ಮನುಷ್ಯನು ಸದರೀ ಟ್ರಸ್ಟಿಗೆ ಸಂಬಂಧಪಡುವ ಲೆಕ್ಕಗಳನ್ನು ಸಂದರ್ಶಿಸಲು ಮತ್ತು ಲೆಕ್ಕಗಳ ಪ್ರತಿಗಳನ್ನು ಮತ್ತು ಆಡಿಟರನ ರಿಪೋರ್ಟ್‌ನ್ನು ಪಡೆಯೆಲು ಬಹುದು. ಹೀಗಾಗಿ ಅವನು ಟ್ರಸ್ಟುಸ್ವತ್ತಿನ ನಿಜವಾದ ಸ್ವಭಾವವನ್ನು - ವ - ಸ್ಥಿತಿಯನ್ನು ಗೊತ್ತು ಮಾಡಲಿಕ್ಕೆ ಆಗುತ್ತದೆ.

ತಕ್ಕ ಕಕ್ಷಿಗಳಿಗೆ ನ್ಯಾಯವಾಗಿ ಕೊಡಲ್ಪಟಬಹುದಾದಂಥ ತಿಳಿವಳಿಕೆಗೊಳಪಟ್ಟು, ಅಫಿಷಿಯಲ್ ಟ್ರಸ್ಟಿಯು ಪ್ರತಿ ಟ್ರಸ್ಟಿನ - ಯಾ - ಎಸ್ಟೇಟಿನ ವಿಷಯದಲ್ಲಿ ತನ್ನಿಂದ ಆಡಳಿತನಡೆಸಲ್ಪಡುವಪರ್ಯಾಯದಲ್ಲಿ ಖಂಡಿತವಾದ ಗೋಪ್ಯವನ್ನು ಆಚರಿಸುತ್ತಾನೆ.

ಟ್ರಸ್ಟುಫಂಡಿಗೆ ಅರ್ಹನಾದ ಒಬ್ಬ ಮನುಷ್ಯನು ಅದರ ಸ್ವಾಧೀನತೆಯನ್ನು ತೆಗೆದುಕೊಳ್ಳುವ ಸಮಯವು ಬಂದಾಗ, ಅವನು ತನ್ನ ಹಕ್ಕಿನಬಗ್ಗೆ ಅಫಿಷಿಯಲ್ ಟ್ರಸ್ಟಿಯನ್ನು ಸಮಾಧಾನಪಡಿಸಿದಮೇಲೆ ಯಾವ ವ್ಯಾಜ್ಯವೂ ಅವಶ್ಯಕವಿಲ್ಲದೆ ಅದನ್ನು ಪಡೆಯಬಹುದು.

ಟ್ರಸ್ಟು ಕಾಲಕಾಲಕ್ಕೆ ಪಾವತಿಗಳನ್ನು ಮಾಡುವಕುರಿತು ನಿಬಂಧಿಸುವೆಲ್ಲಿ ಸದರೀ ಪಾವತಿಗಳು ಕ್ರಮವಾಗಿ ಮತ್ತು ಸರಕಾಲದಲ್ಲಿ ಅರ್ಹರಾದ ಮನುಷ್ಯರಿಗೆ ಕೊಡಲ್ಪಡುತ್ತವೆ.

ಟ್ರಸ್ಟಿನ ಸಂಬಂಧನಿಂದ ಯಾವದಾದರೂ ಕಷ್ಟವಾದ ಪ್ರಸಕ್ತಿಯು ಹುಟ್ಟಿದರೆ, ಅಫಿಷಿಯಲ್ ಟ್ರಸ್ಟಿಯು ಕೋರ್ಟಿನ ಹುಕುಮುಗಳನ್ನು ಪಡೆದು ತದನುಸಾರವಾಗಿ ನಡೆಯುತ್ತಾನೆ.

ಅಫಿಷಿಯಲ್ ಟ್ರಸ್ಟಿಯು ಏನನ್ನು ಮಾಡಬಲ್ಲನೆಂಬುದು.

ಒಂದು ಟ್ರಸ್ಟನ್ನು ನಿರ್ಮಿಸಲು ಇರಾಧಿಸುವ ಒಬ್ಬ ಮನುಷ್ಯನು ಅಫಿಷಿಯಲ್ ಟ್ರಸ್ಟಿಯ ಅನುಮತಿಯನ್ನು ಪಡೆದು ಮತ್ತು ಟ್ರಸ್ಟನ್ನು ನಿರ್ಮಿಸುವ ಒಂದು ಪತ್ರದ ಮೂಲವಾಗಿ ಸದರೀ ಸ್ವತ್ತನ್ನು ಅಫಿಷಿಯಲ್ ಟ್ರಸ್ಟಿಯಲ್ಲಿ ನಿವಿಷ್ಟಪಡಿಸಿ ಅಫಿಷಿಯಲ್ ಟ್ರಸ್ಟಿಯನ್ನು ಅಂಥಾ ಸ್ವೆತ್ತಿನ ಟ್ರಸ್ಟಿಯಾಗಿ ನಿಯಮಿಸಬಹುದು. ಹಾಗೆ ನಿಯಮಿಸೋಣಾಗಲಾಗಿ, ಟ್ರಸ್ಟಿಗೊಳಪಟ್ಟ ಸ್ವತ್ತು ಅಫಿಷಿಯಲ್ ಟ್ರಸ್ಟಿಯಲ್ಲಿ ನಿವಿಷ್ಟವಾಗುವದು, ಮತ್ತು ಮೇಲೆ ಸೂಚಿಸಿದ ಸಾಧನದಿಂದ ವ್ಯೆಕ್ತಗೊಳಿಸಲ್ಪಟ್ಟ ಟ್ರಸ್ಟುಗಳಿಗನುಸಾರವಾಗಿ ಆತನಿಂದ ಇಟ್ಟುಕೊಳ್ಳಲ್ಪಡುತ್ತದೆ ; ಸದರೀ ಪತ್ರವನ್ನು ಅಫಿಷಿಯಲ್ ಟ್ರಸ್ಟಿಯು ಬರೆದುಕೊಡತಕ್ಕದ್ದು.

ಈ ಮೇರೆಗೆ ಅಫಿಷಿಯಲ್ ಟ್ರಸ್ಟಿಯು ಕ್ಲಿಪ್ತವಾದ ಜವಾಬ್ದಾರಿಯುಳ್ಳ ಒಂದು ಕಂಪೆನಿಯ ಡಿಬೆಂಚರು ದಾರರ ಟ್ರಸ್ಟಿಯಾಗಿಯೂ, ವಿವಾಹಕಾಲದಲ್ಲಿ ಮಾಡಿದ ಸೆಟ್ಲ್‌ಮೆಂಟಿನ ಅಥವಾ ಬರೆದುಕೊಟ್ಟವನ ಹೆಂಡತಿಯ - ವ - ಮಕ್ಕಳ - ಯಾ - ಇತರ ಮನುಷ್ಯರ ಪ್ರಯೋಜನಾರ್ಥವಾಗಿಮಾಡಿದ ಸೆಟ್ಲ್‌ಮೆಂಟಿನ ಟ್ರಸ್ಟಿಯಾಗಿಯೂ ನಿಯಮಿಸಲ್ಪಡಬಹುದು. ಅತನನ್ನು ಧರ್ಮಸಂಬಂಧವಾದ - ಯಾ - ಮತಸಂಬಂಧವಾದ ಕಾರ್ಯಗಳಿಬಗ್ಗೆ ಇರಾಧಿಸಲ್ಪಟ್ಟ ಬಂಡವಾಳಗಳ ತಾಬಿಯನ್ನು ಇಟ್ಟುಕೊಳ್ಳಲು ಸಹಾ ನಿಯಮಿಸಬಹುದು, ಪರಂತು ಹಣವನ್ನು ಪಿನಿಯೋಗಿಸುವದನ್ನು ನೋಡಿಕೊಳ್ಳತಕ್ಕಬಗ್ಗೆ ಆತನು ಅಪೇಕ್ಷಿಸಲ್ಪಡತಕ್ಕದ್ದಿಲ್ಲ.

ಅಫಿಷಿಯಲ್ ಟ್ರಸ್ಟಿಯು ಮೆರಣಪಟ್ಟ ಒಬ್ಬ ಮನುಷ್ಯನ ಆಸ್ತಿಯನ್ನು, ಅಂಥಾ ಮನುಷ್ಯನ ಉಯಿಲಿನಮೇರೆಗೆ ಆತನನ್ನು ಮೇಲೆ ಸೂಚಿಸಿದಮೇರೆಗೆ ಒಬ್ಬನೇ ಎಗ್ಜಿಕ್ಯೂಟರ್ - ಯಾ - ಒಬ್ಬನೇ ಟ್ರಸ್ಟಿಯಾಗಿ ಕಂಡೀಕ್ಟಾಗಿ ನಿಯಮಿಸಿರುವ ಪಕ್ಷದಲ್ಲಿ ಆಡಳಿತನಡಿಯಿಸಲು ಬಹುದು.

ಅಫಿಷಿಯಲ್ ಟ್ರಸ್ಟಿಯನ್ನು ಒಂದು ಉಯಿಲಿನಮೇರೆಗೆ ಅದರ ಎಗ್ಜಿಕ್ಯೂಟರನಾಗಿ ನಿಯಮಿಸಿರದೆ ಟ್ರಸ್ಟಿಯಾಗಿಮಾತ್ರ ನಿಯಮಿಸಬಹುದು. ಈ ಸಂಗತಿಯಲ್ಲಿ ಎಗ್ಜಿಕ್ಯೂಟರನು ಅಥವಾ ಅಡ್ಮಿನಿಸ್ಟ್ರೇಟ

ರನು ಉಯಿಲಿನ ಮತಲಬನ್ನು ತಿಳಿಯೆಪಡಿಸಿ ಟ್ರಸ್ಟಿಗೊಳಪಟ್ಟ ಸ್ವತ್ತನ್ನು ಬರಹಮೂಲಕವಾದ ಒಂದು ಸಾಧನದ ಮೂಲವಾಗಿ ಅಫಿಷಿಯಲ್ ಟ್ರಸ್ಟೀಗೆ ಆತನ ಅನುಮತಿಯಿಂದ ಪರಭಾರೆಮಾಡಬಹುದು, ಸದರೀ ಸಾಧನವು ಎಗ್ಜಿಕ್ಯೂಟರನಿಂದ - ಯಾ - ಅಡ್ಮಿನಿಸ್ಟ್ರೇಟರನಿಂದ ಮತ್ತು ಅಫಿಷಿಯಲ್ ಟ್ರಸ್ಟಿಯಿಂದ ಬರೆದು ಕೊಡಲ್ಪಡಬೇಕು ಮತ್ತು ಅದರಲ್ಲಿ ಅಫಿಷಿಯಲ್ ಟ್ರಸ್ಟಿಯ ಅನುಮತಿಯನ್ನು ನಮೂದಿಸಿರತಕ್ಕದ್ದು.

ಖಾಸಗೀ ಟ್ರಸ್ಟಿಗಳು ಅಫಿಷಿಯಲ್ ಟ್ರಸ್ಟಿಯನ್ನು ಬರಹಮೂಲವಾದ ಸಾಧನದ ಮೂಲಕ ತಮ್ಮ ಬದಲಾಗಿ ಟ್ರಸ್ಟಿಯಾಗಿ ನಿಯಮಿಸಬಹುದು, ಅದನ್ನು ಅವರು ಎಲ್ಲರೂ ಮತ್ತು ಅಫಿಷಿಯಲ್ ಟ್ರಸ್ಟಿಯು ಸೇರಿ ಬರೆದುಕೊಡತಕ್ಕದ್ದು ಮತ್ತು ಅದರಲ್ಲಿ ಅಫಿಷಿಯಲ್ ಟ್ರಸ್ಟಿಯ ಅನುಮತಿಯನ್ನು ನಮೂದಿಸಿರತಕ್ಕದ್ದು.

ಒಂದು ದಾನಕ್ಕೆ, ಲಿಗೆಸಿಗೆ (ಉಯಿಲಿನ ಮೂಲವಾಗಿ ಬರುವ ಸ್ವತ್ತಿಗೆ) ಅಥವಾ ಮರಣಪಟ್ಟ ಮನುಷ್ಯನ ಸ್ವತ್ತುಗಳ ಒಂದು ಭಾಗಕ್ಕೆ ಅರ್ಹನಾಗಿರುವ ಅಸಮರ್ಥನಾದ ಒಬ್ಬ ಮನುಷ್ಯನ (ಎಂದರೆ, ಒಬ್ಬ ಅಪ್ರಾಯಸ್ಥನ - ಯಾ - ಹುಚ್ಚನ) ಹಕ್ಕನ್ನು ಅಫಿಷಿಯಲ್ ಟ್ರಸ್ಟೀಗೆ ಪರಭಾರೆಮಾಡಬಹುದು. ಒಂದು ಲಿಗೆಸಿಯ - ಯಾ - ಹಿಸ್ಸೆಯ ಸಂಗತಿಯಲ್ಲಿ ಸದರೀ ಪರಭಾರೆಯು, ಡೋನರು, ಎಗ್ಜಿಕ್ಯೂಟರು - ಯಾ - ಅಡ್ಮಿನಿಸ್ಟ್ರೇಟರಿಂದ ಅಥವಾ ಅಂಥಾ ದಾನದ, ಲಿಗಸಿಯ - ಯಾ - ಹಿಸ್ಸೆಯ ಯಾವನಾದರೂ ಟ್ರಸ್ಟಿಯಿಂದ ಜರಗಿಸಲ್ಪಡಬಹುದು.

ಇದು ಸಹಾ ಖಾಸಗಿ ಜನಗನ್ನು ಜವಾಬ್ದಾರಿಯಿಂದ ಬಿಡುಗಡೆಪಡಿಸಲು ಇರಾಧಿಸಲ್ಪಟ್ಟಿದೆ. ಇದು ಅಸಮರ್ಥನಾಗಿರುವ ಒಬ್ಬ ಮನುಷ್ಯನು ಅರ್ಹನಾಗಿರುವ ದಾನವನ್ನು, ಲಿಗೆಸಿಯನ್ನು ಅಥವಾ ಹಿಸ್ಸೆಯನ್ನು ಪಡೆಯುವವರಿಗೆ ಒಬ್ಬ ಮನುಷ್ಯನನ್ನು ನಿಯಮಿಸುವಂತೆ ಅವರು ಕೋರ್ಟಿಗೆ ಮನವಿಮಾಡಿಕೊಳ್ಳುವ ಆವಶ್ಯಕತೆಯನ್ನು ತಪ್ಪಿಸುತ್ತದೆ, ಮತ್ತು ಖಾಸಗಿ ಎಗ್ಜಿಕ್ಯೂಟರರಿಗೆ - ಯಾ - ಅಡ್ಮಿನಿಸ್ಟ್ರೇಟರರಿಗೆ ಬಹುಕಾಲ ದೀರ್ಘಕಾಲದವರೆಗೆ ಸ್ವತ್ತುಗಳನ್ನು ಕೈವಶದಲ್ಲಿ ಇಟ್ಟುಕೊಳ್ಳದೇನೆ ಸ್ವತ್ತನ್ನು ಹಂಚಿಕೊಟ್ಟು ಆಸ್ತಿಯ ಕೆಲಸವನ್ನು ತೀರಿಸಿಬಿಡಲಿಕ್ಕೆ ಅವಕಾಶಕೊಡುವದು.

ಹೈಕೋರ್ಟಿನವರು ಅಫಿಷಿಯಲ್ ಟ್ರಸ್ಟಿಯನ್ನು ಸ್ವೋತ್ತಿನ ಟ್ರಸ್ಟಿಯಾಗಿ ನಿಯಮಿಸಬಹುದು. ಇದು, ಟ್ರಸ್ಟಿಗಳಿಳಿಗೆ ಅಥವಾ ಟ್ರಸ್ಟಿಗಳ - ವ - ಫಲಾನುಭೋಗಿಗಳ (ಬೆನಿಫಿಶಿಯರಿಗಳ) ಒಳಗೆ ವಿವಾದ ಹುಟ್ಟಿ ಟ್ರಸ್ಟ್ಫಂಡುಗಳು ಅಫಿಷಿಯಲ್ ಟ್ರಸ್ಟಿಯಿಂದ ಆಡಳಿತ ಮಾಡಲ್ಪಡಬೇಕೆಂಬುದಾಗಿ ಕೋರ್ಟಿನವರು ಅಭಿಪ್ರಾಯಪಡುವ ಸಂಗತಿಗಳಲ್ಲಿ ಕೆಲವೇಳೆ ಮಾಡಲ್ಪಡುತ್ತದೆ.

ಅಫಿಷಿಯಲ್ ಟ್ರಸ್ಟಿಯು ಹೊರಿಸಬಹುದಾದ ಫೀಸುಗಳು.

ಅಫಿಷಿಯಲ್ ಟ್ರಸ್ಟಿಯು, ತನ್ನಿಂದ ಪಡೆಯೋಣಾದ ಟ್ರಸ್ಟಿನ ಮೂಲವಾದ ಬಂಡವಾಳದ ಹಣಗಳ ಮೇಲೆ ಮತ್ತು ಇತರ ಎಲ್ಲಾ ಸ್ವತ್ತುಗಳ - ವ - ಸೆಕ್ಯೂರಿಟಿಗಳ ಬಂಡವಾಳದ ಮೌಲ್ಯದಮೇಲೆ ಈ ಕೆಳಗಿನ ದರದಲ್ಲಿ ವ್ಯತಿಫಲವಾಗಿ ಒಂದು ಕಮ್ಮಿಷನು ಪಡೆಯುತ್ತಾನೆ :—

	ಶೇಕಡ.
1 ಲಕ್ಷಕ್ಕೆ ಮೀರದ ಒಂದು ಮೌಲ್ಯದ ಎಸ್ಟೇಟುಗಳಮೇಲೆ	2
1 ಲಕ್ಷಕ್ಕೆ ಮೀರಿ 2 ಲಕ್ಷಕ್ಕೆ ಮೀರದ ಒಂದು ಮೌಲ್ಯದ ಎಸ್ಟೇಟುಗಳಮೇಲೆ—	
ಮೊದಲನೇ ಲಕ್ಷದಮೇಲೆ	2
ಉಳಿದುದರಮೇಲೆ	1½
2 ಲಕ್ಷಗಳಿಗೆ ಮೀರುವ ಒಂದು ಮೌಲ್ಯದ ಎಸ್ಟೇಟುಗಳಮೇಲೆ—	
ಮೊದಲನೇ ಲಕ್ಷದಮೇಲೆ	2
ಎರಡನೇ ಲಕ್ಷದಮೇಲೆ	1½
ಉಳಿದುದರಮೇಲೆ	1

ಬಡ್ಡಿಯ - ಯಾ - ಲಾಭದರೂಪವಾಗಿ ಪಡೆದ ಯಾವತ್ತು ಮೊಬಲಗುಗಳಮೇಲೆ ಶೇಕಡ ಒಂದೆರಂತೆಯೂ ಮತ್ತು ಅವನು ವಸೂಲುಮಾಡಿದ ಬಾಡಿಗೆಗಳಮೇಲೆ ಶೇಕಡ 2½ ಯಂತೆಯೂ ಅವನು ವಾಡಿಕೆಯಾಗಿ ಪಡೆಯುತ್ತಾನೆ.

ಏರಂತು, ಅಫಿಷಿಯಲ್ ಟ್ರಸ್ಟಿಯು ತನ್ನ ಕರ್ತವ್ಯಗಳು ಕೇವಲಸುಲಭವಾಗಿರುತ್ತವೆ - ಯಾ - ಅಸಾಧಾರಣ ಸ್ವಭಾವದವಾಗಿರುತ್ತವೆಂದು ಸಮಾಧಾನಪಟ್ಟರೆ, ಅವನು ಅತಿಕನಿಷ್ಠ ಫೀಸಿನ ಯಾವದಾದರೂ ಭಾಗವನ್ನು ಕಡಿಮೆಮಾಡಬಹುದು.

ಮತ್ತು ಅವನು ಯಾವದಾದರೂ ಟ್ರಸ್ಟಿನ ಆದಾಯವು ಅತ್ಯಧಿಕವಾದ ಹೆಚ್ಚು ಕಡಿಮೆಗಳಿಗೆ ಗುರಿಯಾಗುವುದಿಲ್ಲವೆಂದು ಸಮಾಧಾನಪಟ್ಟರೆ ಅವನು ಆದಾಯದ ವಸೂಲಿಯವಿಷಯದಲ್ಲಿ ಕ್ಲೃಪ್ತವಾದ ಒಂದು ಅರ್ಧ ವಾರ್ಷಿಕ ರುಸುಮನ್ನು ಹೊರಿಸಬಹುದು.

ಅಫಿಷಿಯಲ್ ಟ್ರಸ್ಟಿಯನ್ನು ವರ್ತಿಸುವಂತಿಮಾಡುವ್ದು ಹೇಗೆಂಬುದು.

ಒಂದು ಟ್ರಸ್ಟನ್ನು ಸ್ಥಾಪಿಸಲಿಕ್ಕೆ ಇಚ್ಛೈಸುವ ಯಾವನಾದರೂ ಮನುಷ್ಯನು ಅಫಿಷಿಯಲ್ ಟ್ರಸ್ಟ್ಯಿಗೆ ನೇರವಾಗಿ ಬರೆದುಕೊಳ್ಳಬಹುದು. ಈ ಬಗ್ಗೆ ಯಾವದೊಂದು ವಿಶೇಷವಾದ ಫಾರ್ಮು ಅಗತ್ಯವಿರುವದಿಲ್ಲ ಮತ್ತು ಅತನಿಗೆ ಈಕೆಳಗಿನಂತೆ ಸಾಮಾನ್ಯವಾದ ಪತ್ರವು ಬರೆಯಲ್ಪಡಬಹುದು :—

ಅಫಿಷಿಯಲ್ ಟ್ರಸ್ಟಿಯವರಿಗೆ,

ಮದ್ರಾಸ್.

ಅಯ್ಯಾ,

ನಾನು ಪಟ್ಟಣದಲ್ಲಿ ರೂಪಾಯಿಗಳು ಬೆಲೆಯುಳ್ಳ (ಅಥವಾ ಕ್ಲೃಪ್ತವಾದ ಆದಾಯವುಳ್ಳ ಸ್ಥಿರಸ್ವತ್ತಿನ ಸಂಗತಿಯಲ್ಲಿ, ಇಂಥಿಂಥ ಸ್ವತ್ತಿನಿಂದ ಕೂಡಿರುವ) ಒಂದು ಟ್ರಸ್ಟನ್ನು ನಿರ್ವಿಸಲು ಅಪೇಕ್ಷಿಸುತ್ತೇನೆ. ಅದರ ಆದಾಯವು ನನ್ನ ಮಗಳಿಗೆ (ಅಥವಾ ಗೊತ್ತಾದ ಇತರ ಯಾವ ಬಂಧುವಿಗಾದರೂ) ಅವಳ ಅಪ್ರಾಪ್ತವಯಸ್ಕತೆಯಕಾಲದಲ್ಲಿ ಸಂರಕ್ಷಣೆಯಬಗ್ಗೆ ಕೊಡಲ್ಪಡತಕ್ಕದ್ದು. ಅವಳು ಪ್ರಾಯಸ್ಥಳಾದಮೇಲೆ, ಸದರೀ ಸ್ವತ್ತು ಅವಳಿಗೆ ಕೊಡಲ್ಪಡತಕ್ಕದ್ದು ಮತ್ತು ನೀವು ಅದರ ಟ್ರಸ್ಟ್ಯಿಯಾಗಿರೋಣವು ನಿಂತುಹೋಗತಕ್ಕದ್ದು. ಸದರೀ ವಿಷಯದಲ್ಲಿ ನಾನು ಯಾವ ಏರ್ಪಾಡುಗಳನ್ನು ಮಾಡತಕ್ಕುದೆಂಬುದನ್ನು ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥಿಸುತ್ತೇನೆ.

ನಿಮ್ಮ ವಿಶ್ವಾಸಪಾತ್ರನಾದ,

(ರುಜು)

ಒಂದು ಟ್ರಸ್ಟು ಬಗೆಬಗೆಯ ಉದ್ದೇಶಗಳಬಗ್ಗೆ ರೂಪಿಸಲ್ಪಡಬಹುದು ಮತ್ತು ಹೀಗಾದುದರಿಂದ ಎಲ್ಲಾ ಸಂಗತಿಗಳಿಗೂ ಸರಿಹೋಗುವಂತೆ ಸಾಮಾನ್ಯವಾದ ಒಂದೇತರದ ಒಂದು ನಮೂನೆಯನ್ನು ಇಟ್ಟುಕೊಳ್ಳುವುದು ಸಾಧ್ಯವಲ್ಲ. ವಾಸ್ತವವಾಗಿ ಅವಶ್ಯವಾಗಿರುವುದೆಲ್ಲವೂ ಟ್ರಸ್ಟಿನ ಮೌಲ್ಯ, ಉದ್ದೇಶ - ವ - ವಾಯಿದೆಯನ್ನು ಹೇಳುವುದಾಗಿರುತ್ತದೆ. ಅಂಥ ಪತ್ರಗಳು ಅಫಿಷಿಯಲ್ ಟ್ರಸ್ಟ್ಯಿಯನ್ನು ವರ್ತಿಸುವಹಾಗೆ ಮಾಡುವಬಗ್ಗಿನ ಅರ್ಜಿಗಳು ಮಾತ್ರವೇ ಆಗಿರುವುದರಿಂದ ಅವುಗಳಿಗೆ ಕೋರ್ಟು ಸ್ಟ್ಯಾಂಪುಗಳನ್ನು ಹಚ್ಚುವ ಆವಶ್ಯಕತೆಯಿಲ್ಲ.

ಸದರೀ ಅರ್ಜಿಯು ಅಫಿಷಿಯಲ್ ಟ್ರಸ್ಟ್ಯಿಯ ಆಫೀಸಿನಲ್ಲಿ ತಲಪಿದನಂತರ, ಸದರೀ ಟ್ರಸ್ಟು ಯಾವ ಕರಾರುಗಳಿಗೆ - ವ - ಕರತುಗಳಿಗೆ ಒಳಪಟ್ಟು ಅಂಗೀಕರಿಸಲ್ಪಡುವುದೆಂಬ ಕುರಿತು ತಿಳಿವಳಿಕೆಯು ಮನವಿದಾರನಿಗೆ ಕೊಡಲ್ಪಡುತ್ತದೆ. ಆಮೇಲೆ ಮನವಿದಾರನು ಸದರೀ ಟ್ರಸ್ಟನ್ನು ನಿರ್ವಿಸುವುದಕ್ಕೆ ಇಚ್ಛೈಸಿದರೆ, ಅವನು ಅಫಿಷಿಯಲ್ ಟ್ರಸ್ಟ್ಯಿಯಿಂದ ಒಂದು ಮಸವಿದಾ ಸಾಧನವನ್ನು, ಅದು ಕ್ರಮವಾಗಿರುತ್ತದೋ ಎಂಬುದನ್ನು ಸರಿನೋಡುವಬಗ್ಗೆ ತನಗೆ ಕಳುಹಿಸುವಂತೆ ಕೇಳಿಲ್ಪಡುತ್ತಾನೆ. ಅಫಿಷಿಯಲ್ ಟ್ರಸ್ಟ್ಯಿಯು ಅದು ಕ್ರಮವಾಗಿರುತ್ತದೆಯೋ ಎಂಬುದನ್ನು ನೋಡುವನು ಮತ್ತು ಆಮೇಲೆ ಸದರೀ ಸಾಧನವು ಎಕ್ಸಿಕ್ಯೂಟ್ ಮಾಡಲ್ಪಡುತ್ತದೆ.

ಈ ಪರ್ಯಾಯದಲ್ಲಿಮಾತ್ರವೇ ಸದರೀ ಟ್ರಸ್ಟನ್ನು ಕುರಿತ ಸಾಧನಕ್ಕೆ ಸ್ಟ್ಯಾಂಪು ಹಚ್ಚಬೇಕಾಗಿರುತ್ತದೆ. ಸ್ಟ್ಯಾಂಪು ಟ್ರಸ್ಟಿನವಿಷಯದ ವೊಬಲಗಿಗನುಗುಣವಾಗಿ ಹೆಚ್ಚು ಕಡಿಮೆ ಇರುತ್ತವೆ, ವರಂತು ಟ್ರಸ್ಟನ್ನು ದೃಢೀಕರಿಸುವಬಗ್ಗೆ ಹದಿನೈದು ರೂಪಾಯಿಗಳಿಗೆ - ಯಾ - ರದ್ದುಪಡಿಸುವಬಗ್ಗೆ ಹತ್ತು ರೂಪಾಯಿಗಳಿಗೆ ಮೀರುವುದಿಲ್ಲ.—ಇಂಡಿಯದ ಸ್ಟ್ಯಾಂಪು ಆಕ್ಟಿನ 1 ನೇ ಷೆಡ್ಯೂಲಿನ 64 ನೇ ಬಾಬನ್ನು ನೋಡುವುದು.

ಅಧಿಕಾರಸರಹದ್ದು.

ಮದ್ರಾಸಿನ ಅಫಿಷಿಯಲ್ ಟ್ರಸ್ಟ್ಯಿಯ ಅಧಿಕಾರ ಸರಹದ್ದಿನಲ್ಲಿ ಮದ್ರಾಸ್ ಪ್ರೆಸಿಡೆನ್ಸಿ, ಹೈದರಾಬಾದು, ಮೈಸೂರು, ಕೊಡಗು, ತಿರುವಾಂಕೂರು, ಕೊಚ್ಚಿ, ಪುದುಕೋಟೆ, ಬಂಗನಪಲ್ಲಿ, ಸಂಡೂರು, ಬಂಗಾಳ-ನಾಗಪುರ ರೈಲ್ವೆಯ ರಾಯಪುರ-ವಿಜಯನಗರಂ ಸೆಕ್ಷನಿಂದ ಆವರಿಸಲ್ಪಟ್ಟ ಕಲಹಂದಿ ಸಂಸ್ಥಾನದ ಭಾಗಗಳುಸೇರಿರುತ್ತವೆ.

ದರಾ.

ಈ ವಹಿಯೆನ್ನು ಈಕೆಳಗಿನ ರೀತಿಯಲ್ಲಿ ಹಂಚಬಹುದೆಂದು ಸೂಚಿಸಲ್ಪಟ್ಟಿದೆ :—

(1) (ಇಂಗ್ಲೀಷಿನಲ್ಲಿ — ವ — ದೇಶಭಾಷೆಯಲ್ಲಿ) ಫೋರ್ಟ್ ಸೈಂಟ್ ಜಾರ್ಜ್ ಗಜೀಟಿಗೂ ಪ್ರತಿ ಡಿಸ್ಟ್ರಿಕ್ಟ್ ಗಜೀಟಿಗೂ ಹೆಚ್ಚಿಗೆ ಪುಟಗಳಾಗಿ.

(2) (ಇಂಗ್ಲೀಷಿನಲ್ಲಿ - ವ - ದೇಶಭಾಷೆಯಲ್ಲಿ) ಮೊಫತ್ತಾಗಿ ಹಂಚುವಬಗ್ಗೆ ಎಲ್ಲಾ ಜಿಲ್ಲಾ ಕಲೆಕ್ಟರುಗಳಿಗೂ ಎಲ್ಲಾ ರೆವಿನ್ಯೂ ಒಳ ಆಫಿಸರುಗಳಿಗೂ.

(3) (ಇಂಗ್ಲೀಷಿನಲ್ಲಿ - ವ - ದೇಶಭಾಷೆಯಲ್ಲಿ) ಚೇಂಬರ್ ಆಫ್ ಕಮ್ಮರ್ಸಿನವರಿಗೆ.

(4) (ಇಂಗ್ಲೀಷಿನಲ್ಲಿ) ಇಂಗ್ಲೀಷ್ ಫರ್ಮು (ವರ್ತಕ ಸಂಘ) ಗಳ ಮುಖ್ಯಸ್ಥರಿಗೆ.

(5) (ಇಂಗ್ಲೀಷಿನಲ್ಲಿ - ವ - ದೇಶಭಾಷೆಯಲ್ಲಿ) ದೇಶೀಯ ಫರ್ಮುಗಳ ಮುಖ್ಯಸ್ಥರಿಗೆ.

(6) ವಾರ್ತಾಪತ್ರಿಕೆಗಳಿಗೆ.

(7) ಹೈದರಾಬಾದು, ಮೈಸೂರು, ಕೊಡಗು, ತಿರುವಾಂಕೂರು, ಕೊಚ್ಚಿ, ಪುದುಕೋಟಿ, ಬಂಗನಪಲ್ಲಿ, ಸಂಡೂರು ಮತ್ತು ಬಂಗಾಳ-ನಾಗಪುರದ ರೈಲ್ವೆಯ ರಾಯವ್ಪುರ-ವಿಜಯನಗರಂ ಸೆಕ್ಷನಿಂದ ಆವರಿಸಲ್ಪಟ್ಟ ಕಲಹಂದಿ ಸಂಸ್ಥಾನದ ಭಾಗಗಳಿಗೆ ಸಾಧ್ಯವಾದಷ್ಟುಮಟ್ಟಿಗೆ ಇದೇ ರೀತಿಯಲ್ಲಿ ಹಂಚಿಕೋಣವು.

ಅವಶಿಷ್ಟ.

ಆಫಿಸಿಯಲ್ ಟ್ರಸ್ಟಿಯ ಉದ್ಯೋಗಕ್ಕೆ ಸಂಬಂಧಪಡುವ ಕ್ರಮಗಳು.

ಕ್ರಮ I.—(1) ಆಫಿಸಿಯಲ್ ಟ್ರಸ್ಟಿಯು, ಈ ಆಕ್ಟಿನಮೇರೆಗೆ ತನಗೆ ವರ್ಗಾಯಿಸಲ್ಪಟ್ಟ - ಯಾ - ತನ್ನಲ್ಲಿ ನಿವಿಷ್ಟವಾಗಿರುವ ಯಾವತ್ತು ಟ್ರಸ್ಟಿನ ಸ್ವತ್ತುಗಳ ವಿಷಯದಲ್ಲಿ ಪ್ರತಿಫಲರೂಪವಾಗಿ ಒಂದು ಕಮ್ಮಿಷನನ್ನು ಹೊರಿಸತಕ್ಕದ್ದು, ಅದರ ಕನಿಷ್ಠದರವು ಇದರಡಿ ಕಾಣಿಸಿರುವಮೇರೆಗೆ ಇರತಕ್ಕದ್ದು, ಎಂದರೆ—

ಟ್ರಸ್ಟಿನ ಮೂಲವಾಗಿ ವರ್ಷಟ್ಟು ಆತನಿಂದ ಅಂಗೀಕರಿಸಲ್ಪಟ್ಟ ಯಾವತ್ತೂ ಮೂಲಧನದ ಮೊಬಲಗುಗಳಮೇಲೆಯೂ, ಮತ್ತು ಇತರ ಸಮಸ್ತ ಸ್ವತ್ತುಗಳ ಮತ್ತು ಯಾವತ್ತೂ ತರದ ಸೆಕ್ಯೂರಿಟಿಗಳ ಅಸ್ಸಲು ಮೌಲ್ಯದಮೇಲೆಯೂ ಈಕೆಳಗಿನ ದರದಲ್ಲಿ ಒಂದು ಕಮ್ಮಿಷನು :—

	ಶೇಕಡ.
ಒಂದು ಲಕ್ಷಕ್ಕೆ ಮೀರದ ಒಂದು ಮೌಲ್ಯದ ಎಸ್ಟೇಟುಗಳಮೇಲೆ ...	2
ಒಂದು ಲಕ್ಷಕ್ಕೆ ಮೀರುವ -ವ- ಎರಡು ಲಕ್ಷಕ್ಕೆ ಮೀರದ ಒಂದು ಮೌಲ್ಯದ ಎಸ್ಟೇಟುಗಳಮೇಲೆ—	
ಮೊದಲನೇ ಲಕ್ಷದಮೇಲೆ	2
ಉಳಿದುದರಮೇಲೆ	$1\frac{1}{2}$
ಎರಡು ಲಕ್ಷಗಳಿಗೆ ಮೀರುವ ಒಂದು ಮೌಲ್ಯದ ಎಸ್ಟೇಟುಗಳಮೇಲೆ—	
ಮೊದಲನೇ ಲಕ್ಷದಮೇಲೆ	2
ಎರಡನೇ ಲಕ್ಷದಮೇಲೆ	$1\frac{1}{2}$
ಉಳಿದುದರಮೇಲೆ	1

ಸಂಚಯಕ್ಕೆಡೋಣಾದ ಹಣದ ವಿಷಯದಲ್ಲಿ ಬಡ್ಡಿ -ಯಾ- ಡಿವಿಡೆಂಡುಗಳ ರೂಪವಾಗಿ ಆತನಿಂದ ಈಸುಕೊಳ್ಳಲ್ಪಟ್ಟ ಸಮಸ್ತ ಮೊಬಲಗುಗಳಮೇಲೆ ಸೇಕಡಾ ಒಂದರೆಮೇರೆಗಿನ ಒಂದು ಕಮ್ಮಿಷನು. ಆತನು ವಸೂಲು ಮಾಡಿದ ಸಮಸ್ತ ಗೇಣಿಯ ಮೊಬಲಗುಗಳಮೇಲೆ ಸೇಕಡಾ ಎರಡೂವರೆಯ ದರದಮೇರೆಗೆ ಒಂದು ಕಮ್ಮಿಷನು.

ಪರಂತು 1920 ನೇ ಇಸವಿಯ ಫೆಬ್ರವರಿ 1 ನೇ ತಾರೀಖಿಗೆ ಮುಂಚೆ ಆಫಿಸಿಯಲ್ ಟ್ರಸ್ಟಿಯಿಂದ ಅಂಗೀಕರಿಸೋಣಾದ ಟ್ರಸ್ಟುಗಳ ಸಂಗತಿಯಲ್ಲಿ ಆತನು ಹೊರಿಸಬಹುದಾದ ಕಮ್ಮಿಷನಿನ ದರ - ಯಾ - ದರಗಳು ಸದರೀ ತಾರೀಖಿಗೆ ಮುಂಚೆ ಅಂಥ ಟ್ರಸ್ಟು ಎಸ್ಟೇಟಿನ ಸಂಗತಿಯಲ್ಲಿ ಹೊರಿಸಲ್ಪಟ್ಟಿದ್ದ ದರ - ಯಾ - ದರಗಳೇ ಆಗಿರತಕ್ಕದ್ದು.

(2) ಯಾವದೊಂದು ಸಂಗತಿಯಲ್ಲಿ ಒಂದು ಟ್ರಸ್ಟಿನ ವಿದ್ಯಮಾನಗಳು ಅವುಗಳ ವಿಷಯದಲ್ಲಿ ಆತನ ಕರ್ತವ್ಯಗಳು ವಿಶೇಷವಾಗಿ ಸುಲಭವಾಗಿವೆ - ಯಾ - ಬಹುಕಷ್ಟ ಸುಲಭವಾಗುವಂತಿವೆ ಅಥವಾ ಈರೀತಿ ಮಾಡುವದನ್ನು ನ್ಯಾಯವಪಡಿಸುವಷ್ಟು ವಿಶೇಷಸ್ವಭಾವದವಾಗಿವೆ ಎಂದು ಆಫಿಸಿಯಲ್ ಟ್ರಸ್ಟಿಗೆ ಕಂಡುಬಂದ ಪಕ್ಷದಲ್ಲಿ, ನಿರ್ದೇಶಿಸಲ್ಪಟ್ಟ ಕನಿಷ್ಠ ಫೀಸಿನ ಯಾವ ಭಾಗವನ್ನಾದರೂ ಆತನು ಮಾಫಿಬಿಡಬಹುದು; ಆದರೆ, ಅಂಥ ಪ್ರತಿ ಸಂಗತಿಯಲ್ಲಿ ಆ ರೀತಿಮಾಡಲು ಯಿದ್ದ ಕಾರಣಗಳನ್ನು ಆತನು ಬರಹಮೂಲನಡಿಸತಕ್ಕದ್ದು, ಮತ್ತು ಅಂಥ ಸಂಗತಿಗಳ ಕುರಿತು ಒಂದು ರಿಪೋರ್ಟನ್ನು ಪ್ರತಿ ಅರ್ಧ ವರ್ಷದಲ್ಲಿಯೂ ಗವರ್ನ್‌ಮೆಂಟಿಗೆ ಕಳುಹಿಸತಕ್ಕದ್ದು.

(3) ಯಾವದೊಂದು ಟ್ರಸ್ಟಿನ ಆದಾಯವು ವಿಶೇಷವಾಗಿ ಹೆಚ್ಚು ಕಡಿಮೆಯಾಗಲು ಗುರಿಪಡುವದಿಲ್ಲವಾಗಿ ಆಫಿಸಿಯಲ್ ಟ್ರಸ್ಟಿಯು ಅಭಿಪ್ರಾಯಪಟ್ಟರೆ, ಆತನು (ಮೇಲಿನ 1 ನೇ ಒಳಕ್ರಮದವರೆಗೆ ಮೂಲ

ಧನದಮೇಲೆ ಪಾವತಿಯಾಗತಕ್ಕ ಕಮ್ಮಿಷನು ಅಲ್ಲದೆ ಇತರ ಕಮ್ಮಿಷನಿನ ಬದಲಾಗಿ) ತನಗೆ ನ್ಯಾಯವೆಂದು ತೋರುವಂಥ ನಿರ್ದೇತವಾದ ಒಂದು ಮೊಬಲಗನ್ನು ಅರ್ಧವಾರ್ಷಿಕ ಫೀಸಾಗಿ ಆಗಿಂದಾಗ್ಗೆ ಹೊರಿಸಬಹುದು. ಅಂಥಾ ಸಂಗತಿಗಳ ಕುರಿತು ಒಂದು ರಿಪೋರ್ಟನ್ನು ಪ್ರತಿ ಅರ್ಧ ವರ್ಷದಲ್ಲಿಯೂ ಗವರ್ನ್‌ಮೆಂಟಿಗೆ ಕಳುಹಿಸತಕ್ಕದ್ದು.

ಕ್ರಮ II.—(1) ಅಫಿಷಿಯಲ್ ಟ್ರಸ್ಟಿಯ ತಾಬೆಯಲ್ಲಿರುವ ಟ್ರಸ್ಟಿನಮೇಲೆ ಹೊರಿಸತಕ್ಕವುಗಳ ಹೊರತಾಗಿ, ಈ ಕ್ರಮೆಗಳೆಮೇರೆಗೆ ಹೊರಿಸತಕ್ಕ ಸಮಸ್ತ ಫೀಸುಗಳನ್ನು - ವೆ - ಕಮಿಶನನ್ನು, ಪಾವತಿ ಮಾಡಲು ಗುರಿಯಾಗಿರುವ ಮನುಷ್ಯನು ಅಫಿಷಿಯಲ್ ಟ್ರಸ್ಟಿಗೆ ಮುಂದಾಗಿ ಪಾವತಿವಡತಕ್ಕದ್ದು.

(2) ಈ ಕ್ರಮೆಗಳ ನಿಬಂಧನೆಗಳೆ ಮೇರೆಗೆ ಅಫಿಷಿಯಲ್ ಟ್ರಸ್ಟಿಯಿಂದ ವಸೂಲುಮಾಡಲ್ಪಡುವ ಸಮಸ್ತ ಫೀಸು - ವೆ - ಕಮ್ಮಿಷನನ್ನು ಅವು ವಸೂಲು ಬಂದ ತಿಂಗಳ ಮುಂದಿನ ತಿಂಗಳ 20 ನೇ ತಾರೀಖಿನಲ್ಲಿ - ಯಾ - ಅದಕ್ಕೆ ಮುಂಚಿತವಾಗಿ ಮೆದ್ರಾಸ್ ಬ್ಯಾಂಕಿನಲ್ಲಿ ಇಂಡಿಯಾ ಗವರ್ನ್‌ಮೆಂಟಿನವರ ಜಮೆಗೆ ಪಾವತಿಮಾಡತಕ್ಕದ್ದು :

"ಪರಂತು ಹೆಚ್ಚಿಗೆ ಹೊರಿಸಲ್ಪಟ್ಟ ಫೀಸನ್ನು - ವ - ಕಮ್ಮಿಷನನ್ನು ಅಫಿಷಿಲ್ ಟ್ರಸ್ಟಿಯು ಈ ಕ್ರಮೆಗಳ ನಿಬಂಧನೆಗಳಮೇರೆಗೆ ವಸೂಲುಮಾಡಿರುವ ಫೀಸಿನಿಂದಲೂ ಕಮ್ಮಿಷನಿನಿಂದಲೂ ಮರುಪಾವತಿ (ರೀಫಂಡು) ಮಾಡಬಹುದು."

ಕ್ರಮ III.—ಅಫಿಷಿಯಲ್ ಟ್ರಸ್ಟಿಯು ಈಕಳಗೆ ಹೇಳಿರುವ ರಿಜಿಸ್ಟರುಗಳು, ಲೆಕ್ಕದ ಬುಕ್ಕುಗಳ ಮುಂತಾದವುಗಳನ್ನು ಇಡತಕ್ಕದ್ದು :—

(1) ಟ್ರಸ್ಟುಗಳ ರಿಜಿಸ್ಟರು, ಇದರಲ್ಲಿ—

(a) 1914 ನೇ ಇಸವಿಯ ಏಪ್ರಿಲ್ 1 ನೇ ತಾರೀಖಿನಲ್ಲಿ ಅಫಿಷಿಯಲ್ ಟ್ರಸ್ಟಿಯಲ್ಲಿ ನಿವಿಷ್ಟವಾಗಿರುವ ಎಲ್ಲಾ ಟ್ರಸ್ಟುಗಳ ಮತ್ತು ಅನಂತರ ಆತನಲ್ಲಿ ನಿವಿಷ್ಟವಾಗುತ್ತಾ ಬಂದಿರುವ ಎಲ್ಲಾ ಟ್ರಸ್ಟುಗಳ ಬಾಬತು ಜಂಜರಾ ನಂಬರು ಶಿಶೀ ಒಂದು ಗೋಶ್ವಾರೆಯೆನ್ನು,

(b) ಅಫಿಷಿಯಲ್ ಟ್ರಸ್ಟಿಯನ್ನು ನೇಮಕಮಾಡಿ ಕೋರ್ಟಿನವರು ಕೊಟ್ಟ ಪ್ರತಿ ಒಂದು ಹುಕುಮಿನ ಅಥವಾ ಟ್ರಸ್ಟು ಸಾಧನದ ತಾರೀಖನ್ನು,

(c) ಆಗಿಂದಾಗ್ಗೆ ಬಂದ ಸೆಕ್ಯೂರಿಟಿಗಳನ್ನು - ವೆ - ಅವುಗಳ ವಿನಿಯೋಗವನ್ನು ತೋರಿಸುವ ಒಂದು ಸ್ಟೇಟ್‌ಮೆಂಟನ್ನು,

(d) ಪ್ರತಿಯೊಂದು ಆಸ್ತಿಯ ಆದಾಯಕ್ಕೆ - ವೆ - ಮೂಲಧನಕ್ಕೆ ಅರ್ಹರಾಗಿರುವ ಮನುಷ್ಯರ ಹೆಸರುಗಳನ್ನು,

(e) ಪ್ರತಿಯೊಂದು ಆಸ್ತಿಯ ಕುರಿತು ಹೊರಿಸಬಹುದಾದ ಕಮ್ಮಿಷನಿನ ದರವನ್ನು,

ನಮೂದಿಸತಕ್ಕದ್ದು.

(2) ಒಂದು ಕ್ಯಾಶ್ ಬುಕ್ಕು ಯಾನೆ ಜಮಾಖರ್ಚಿನ ಹಾತಖರಡೆ—ಇದರಲ್ಲಿ ಪ್ರತಿಪ್ರತ್ಯೇಕ ರಿಖಾನೆಗಳಲ್ಲಿ ಆಫಿಸು ಮುಖಾಂತರ ಜರಗಿಸಿದ ಪ್ರತಿ ಜಮಾ - ವ - ಪಾವತಿಯೆನ್ನೂ ಮತ್ತು ಮೆದ್ರಾಸ್ ಬ್ಯಾಂಕಿನ ಮುಖಾಂತರ ಜರಗಿಸಿದ ಪ್ರತಿ ಜಮಾ - ವೆ - ಪಾವತಿಯೆನ್ನೂ, ಅವು ವಸೂಲುಬಂದ - ವೆ - ಪಾವತಿ ಮಾಡಿದ ತಾರೀಖುಗಳನ್ನೂ ಮತ್ತು ಪ್ರತಿ ಪಾವತಿಯ ಸಂಗತಿಯಲ್ಲಿ ವೌಚರು ನಂಬರುಗಳನ್ನೂ, ಮತ್ತು ಸಮಸ್ತ ಸೆಕ್ಯೂರಿಟಿಗಳ ಪ್ರತಿ ಪ್ರತ್ಯೇಕ ಮೊಬಲಗಿನ ಮತ್ತು ರೊಕ್ಕದ ಪ್ರತಿನಿತ್ಯದ ಸಿಲಕು ಬಾಕಿಯನ್ನೂ ತೋರಿಸತಕ್ಕದ್ದು.

(3) ಒಂದು ಲೆಡ್ಜರು (ಖಾತೆ)—ಇದರಲ್ಲಿ ಪ್ರತಿ ಒಂದು ಎಸ್ಟೇಟಿನ ಬಾಬತು ಪ್ರತಿಪ್ರತ್ಯೇಕ ಲೆಕ್ಕ ಅಡಗಿರತಕ್ಕದ್ದು. ವಸೂಲಿಗಳ - ವೆ - ಪಾವತಿಗಳ ತಾರೀಖುಗಳನ್ನೂ, ಗವರ್ನ್‌ಮೆಂಟು - ವೆ - ಇತರ ಸೆಕ್ಯೂರಿಟಿಗಳ ವೊತ್ತವನ್ನೂ ಮತ್ತು ರೊಕ್ಕ ಲೇವಾದೇವಿಗಳ ಮೊಬಲಗನ್ನೂ ಪ್ರತಿಪ್ರತ್ಯೇಕ ರಿಖಾನೆಗಳಲ್ಲಿ ಕಾಣಿಸತಕ್ಕದ್ದು ಮತ್ತು ಲೆಡ್‌ಜರಿನಲ್ಲಿಯ ಪ್ರತಿಯೊಂದು ಲೆಕ್ಕದ ಬಾಬತು ವರ್ಷಕ್ಕೆ ಎರಡು ಸಲ, ಎಂದರೆ ಜೂನು 30 ನೇ ತಾರೀಖಿನಲ್ಲಿಯೂ ಡಿಸೆಂಬರು 31 ನೇ ತಾರೀಖಿನಲ್ಲಿಯೂ ಸಿಲಕು ಬಾಕಿಯನ್ನು ತೋರಿಸತಕ್ಕದ್ದು.

(4) ಮೆದ್ರಾಸ್ ಬ್ಯಾಂಕಿನಲ್ಲಿ ಡಿಪಾಜಿಟುಮಾಡಿರುವ ಸಮಸ್ತ ಗವರ್ನ್‌ಮೆಂಟ್ ಸೆಕ್ಯೂರಿಟಿಗಳನ್ನು, ಬ್ಯಾಂಕು ಹಿಸೆಗಳನ್ನು ಮತ್ತು ಇತರ ಸೆಕ್ಯೂರಿಟಿಗಳನ್ನು ತೋರಿಸುವ ಒಂದು ರಿಜಿಸ್ಟರು ; ಇದರಲ್ಲಿ ಅರ್ಧವರ್ಷಕ್ಕೊಮ್ಮೆ ಬಡ್ಡಿ - ಯಾ - ಡಿವಿಡೆಂಡುಗಳು ವಸೂಲಾಗಿರುವದೆನ್ನು ಕಾಣಿಸತಕ್ಕದ್ದು.

(5) ರೆಂಟ್‌ಬುಕ್ಕು (ಬಾಡಿಗೆ ವಸೂಲಿಯೆನ್ನು ತೋರಿಸುವ ಪುಸ್ತಕ)--ಇದರಲ್ಲಿ ಅಫಿಷಿಯಲ್ ಟ್ರಸ್ಟಿಯ ಆಡಳಿತೆಯೊಳಗಿರುವ ಪ್ರತಿಯೊಂದು ಮನೆಯನ್ನೂ, ಅದು ಯಾವ ಟ್ರಸ್ಟು ಆಸ್ತಿಗೆ ಸಂಬಂಧಿಸುತ್ತದೋ ಆ ಟ್ರಸ್ಟಿನ ಹೆಸರನ್ನೂ, ಒಕ್ಕಲು ಇದ್ದವನ (ಬಾಡಿಗೆಗೆ ಇಟ್ಟುಕೊಂಡವನ) ಹೆಸರನ್ನೂ, ಬರಬೇಕಾದ ಬಾಡಿಗೆಯ ಬಾಕಿ ಯಾವದೂ ಇದ್ದರೆ ಅದನ್ನೂ, ಚಾಲತಿ ತಿಂಗಳಿಗೆ ಬರಬೇಕಾದ ಬಾಡಿಗೆಯ ಮೊಬಲಗನ್ನೂ, ವಸೂಲ್ತಾದ ತಾರೀಖಿನ್ನೂ ಮತ್ತು ವಸೂಲು ಬಂದ ಮೊಬಲಗನ್ನೂ ದಾಖಲುಮಾಡತಕ್ಕದ್ದು.

(6) ರಸೀದಿ ಬುಕ್ಕು—ಜಂಜರಾ ನಂಬರು ಛಾಪಿಸಲ್ಪಟ್ಟಿರುವ ರಸೀದಿಗಳ -ವ- ಕೌಂಟರ್‌ಫಾಯಿಲುಗಳ ಖಾಲಿ ಫಾರಂಗಳು ಇರುವಂಥಾದ್ದು. ರೊಕ್ಕ ಹಣದಬಗ್ಗೂ, ಗವರ್ನ್‌ಮೆಂಟ್ - ವ - ಇತರ ಸೆಕ್ಯೂರಿಟಿಗಳ ಬಗ್ಗೂ ಕೊಡಲ್ಪಡುವ ಯಾವತ್ತು ರಸೀದಿಗಳಬಗ್ಗೆ ಈ ಫಾರ್ಮುಗಳನ್ನು ಉಪಯೋಗಿಸತಕ್ಕದ್ದು.

(7) ಕಮ್ಮಿಷನ್ ಬುಕ್ಕು—ಅಫಿಷಿಯಲ್ ಟ್ರಸ್ಟಿಗೆ ಸಾವತಿಯಾಗತಕ್ಕ ಕಮ್ಮಿಷನಿನ - ವ- ಫೀಸಿನ ಬಗ್ಗೆ ವಸೂಲಾದ್ದು ಮತ್ತು ಅವುಗಳಿಂದ ಬಟವಾಡೆಯಾದ ಮೊಬಲಗುಗಳು ಕಾಣಿಸಲ್ಪಡುವೆಬಗ್ಗೆ.

(8) ಟಫಾಲ್ ರವಾನಾ ಪುಸ್ತಕ—ಟಪಾಲ್ ಮೂಲವಾಗಿ ರವಾನಿಸಲ್ಪಟ್ಟ ಕಾಗದಗಳಬಗ್ಗೆ.

(9) ಕಾಗದಗಳ ಬಟವಾಡೆ ಬುಕ್ಕು—ಜವಾನನ ಮುಖಾಂತರ ಬಟವಾಡೆಮಾಡಿದ ಕಾಗದಗಳ ಬಗ್ಗೆ.

(10) ಆವಕ (ತಲುಪಿದ ಕಾಗದಗಳ) ರಿಜಿಸ್ಟರು.

ಕ್ರಮ IV.—(1) ಅಫಿಷಿಯಲ್ ಟ್ರಸ್ಟಿಯು ಪ್ರತಿ ವರ್ಷ ಎರಡು ಸಲ, ಎಂದರೆ ಏಪ್ರಿಲ್ ಒಂದನೆಯ ತಾರೀಖಿನಲ್ಲಿ - ಯಾ - ಅದಕ್ಕೆ ಮುಂಚೆ ಮತ್ತು ಅಕ್ಟೋಬರು ಒಂದನೆಯ ತಾರೀಖಿನಲ್ಲಿ - ಯಾ -ಅದಕ್ಕೆ ಮುಂಚೆ ತಾನು ಟ್ರಸ್ಟಿಯಾಗಿರುವ ಪ್ರತಿಯೊಂದು ಟ್ರಸ್ಟಿನಬಗ್ಗಾಗಿ ತಾನು ಈಸುಕೊಂಡ - ಯಾ - ಪಾವತಿಮಾಡಿದ - ಯಾ - ಒಪ್ಪಿಸಿದ ಯಾವತ್ತು ಹಣದ ಒಟ್ಟು ಮೊಬಲಗುಗಳನ್ನು ಮತ್ತು ಎಲ್ಲಾ ಬಾಂಡ್‌ಗಳನ್ನು - ಯಾ - ಇತರ ಸೆಕ್ಯೂರಿಟಿಗಳನ್ನು ಮತ್ತು ಅಂಥಾ ಷೆಡ್ಯೂಲನ್ನು ಒಪ್ಪಿಸುವ ತಾರೀಖಿನ ಹಿಂದಿನ ಜೂನು ಮೊವತ್ತನೆಯತಾರೀಖಿಗೆ ಮತ್ತು ಡಿಸೆಂಬರು ಮೊವತ್ತೊಂದನೆಯ ತಾರೀಖಿಗೆ ಅಂತ್ಯವಾಗುವ ಅರ್ಧವರ್ಷದಲ್ಲಿಯ ಸಿಲಕು ಬಾಕಿಗಳನ್ನು ಕಾಣಿಸುವ ಒಂದು ಯಥಾರ್ಥವಾದ ಷೆಡ್ಯೂಲನ್ನು ಮತ್ತು ಅದೇ ವಾಯಿದೆಯಲ್ಲಿ ಸಮಾವೃತವಾಗಿರುವ ಅಥವಾ ಅಫಿಷಿಯಲ್ ಟ್ರಸ್ಟಿಯು ತಾನು ಟ್ರಸ್ಟಿಯಾಗಿರುವದು ನಿಂತು ಹೋಗಿರುವ ಮತ್ತು ಟ್ರಸ್ಟಿಗೊಳಪಟ್ಟ ಸ್ವತ್ತು ಅದಕ್ಕೆ ಅರ್ಹರಾಗಿರುವ ಮನುಷ್ಯರಿಗೆ - ಯಾ - ಹೊಸ ಟ್ರಸ್ಟಿಗಳಿಗೆ ಪಾವತಿಮಾಡಲ್ಪಟ್ಟಿರುವ - ಯಾ - ಒಪ್ಪಿಸಲ್ಪಟ್ಟಿರುವ ಯಾವತ್ತು ಟ್ರಸ್ಟುಗಳನ್ನು ಕಾಣಿಸುವ, ಅಂಥಾ ಸ್ವೀತ್ತಿನ ಸ್ವಭಾವ - ವ - ಮೊಬಲಗು - ಯಾ - ಮೌಲ್ಯ ಮತ್ತು ಅದು ಪಾವತಿಮಾಡಲ್ಪಟ್ಟಿರುವ - ಯಾ - ಒಪ್ಪಿಸಲ್ಪಟ್ಟಿರುವ ಮನುಷ್ಯರನ್ನು ನಮೂದಿಸಿ, ಯಥಾರ್ಥವಾದ ಒಂದು ಷೆಡ್ಯೂಲನ್ನು ಗವರ್ನ್‌ಮೆಂಟಿಗೆ ಒಪ್ಪಿಸತಕ್ಕದ್ದು.

(2) ಅಫಿಷಿಯಲ್ ಟ್ರಸ್ಟಿಯು ಹಿಂದಿನ ಕೊನೆಯ ಕ್ರಮದ ಮೀರಿಗೆ ಪ್ರತಿ ಅರ್ಧವರ್ಷದ ಷೆಡ್ಯೂಲುಗಳನ್ನು ತಯಾರಿಸಿದಬಗ್ಗೆ 180 ರೂಪಾಯಿ ಫೀಸನ್ನು ಹೊಂದಲು ಅರ್ಹನಾಗಿರತಕ್ಕದ್ದು.

ಕ್ರಮ V.—(1) ಅಫಿಷಿಯಲ್ ಟ್ರಸ್ಟಿಯ ಲೆಕ್ಕಗಳು ಮತ್ತು ಷೆಡ್ಯೂಲುಗಳು ಪ್ರತಿ ಅರ್ಧ ವರ್ಷದಲ್ಲಿಯೂ ಆಡಿಟ್‌ಮಾಡಿ (ಪರಿಶೋಧಿಸಲ್ಪಡತಕ್ಕದ್ದು ಮತ್ತು ಅಕೌಂಟಾಂಟ್ ಜನರಲು ಅಫಿಷಿಯಲ್ ಟ್ರಸ್ಟಿಯು ಲೆಕ್ಕಗಳನ್ನು ಪರಿಶೋಧಿಸುವೆಬಗ್ಗೆ ಆಡಿಟರನನ್ನು - ಯಾ - ಆಡಿಟರರನ್ನು ಆಗಿಂದಾಗ ನಿಯಮಿಸತಕ್ಕದ್ದು.

(2) ಸದರೀ ಆಡಿಟರು - ಯಾ - ಆಡಿಟರರು, ಆಡಿಟ್ ರಿಪೋರ್ಟಿನೊಂದಿಗೆ ಇದರಡಿ ನಮೂದಿಸಿದ ಫಾರ್ಮುಗಳಲ್ಲಿ ಲೆಕ್ಕಗಳ ಒಂದು ಸ್ಟೇಟ್‌ಮೆಂಟನ್ನು ಗವರ್ನ್‌ಮೆಂಟಿಗೆ ಕಳುಹಿಸಿಕೊಡತಕ್ಕದ್ದು :—

(i) ಸದರೀ ಅರ್ಧ ವರ್ಷದಲ್ಲಿ ಜಮೆಯಾದ ಮತ್ತು ಪಾವತಿಯಾದ ಕ್ಯಾಶ್ (ರೊಕ್ಕ ಹಣದ) ಮತ್ತು ಗವರ್ನ್‌ಮೆಂಟ್ - ವ - ಇತರ ಸೆಕ್ಯೂರಿಟಿಗಳ ಎಬ್‌ಸ್ಟ್ರಾ)ಕ್ಟು.

(ii) ಅಫಿಷಿಯಲ್ ಟ್ರಸ್ಟಿಯ ಅರ್ಧ ವರ್ಷದ ಬ್ಯಾಲನ್ಸು (ಸಿಲಕು ಬಾಕಿ).

(iii) ಅಫಿಷಿಯಲ್ ಟ್ರಸ್ಟಿಯ ಅರ್ಧ ವರ್ಷದಲ್ಲಿಯ ಕಮ್ಮಿಷನು ಲೆಕ್ಕದ ಗೋಶ್ವಾರೆ.

(iv) ಸಂಚಯಕ್ಕೆಡದೆ ಯಿದ್ದಬಗ್ಗೆ ಸಬಬುಗಳ ನಿಶೀ, ಅರ್ಧ ವರ್ಷದ ಕೊನೆಯ ದಿವಸದಲ್ಲಿ ನಿಂತಿರುವ ರೂ. 100 - ವ - ಅಧಿಕ ಸಿಲಕು ಬಾಕಿಗಳನ್ನು ತೋರಿಸುವ ಸ್ಟೇಟ್‌ಮೆಂಟು.

(3) ಅಕೌಂಟಾಂಟ್ ಜನರಲು ಪ್ರತಿ ಅರ್ಧ ವರ್ಷದ ಆಡಿಟಿನಬಗ್ಗೆ 150 ರೂಪಾಯಿ ಫೀಸನ್ನು ಹೊಂದಿಲು ಅರ್ಹನಾಗಿರತಕ್ಕದ್ದು.

(4) ಮೇಲೆ ಹೇಳಿದ ಷೆಡ್ಯೂಲುಗಳನ್ನು ಮತ್ತು ಲೆಕ್ಕಗಳನ್ನು ತಯಾರಿಸುವ ಮತ್ತು ಮೇಲೆ ಹೇಳಿದಮೇರೆಗಿನ ಅಂಥಾ ಪ್ರತಿ ಆಡಿಟಿನ – ವೆ – ಪರಿಶೋಧನೆಯ ಖರ್ಚು – ವೆ – ವೆಚ್ಚಗಳು ಸದರೀ ಷೆಡ್ಯೂಲುಗಳು ಮತ್ತು ಲೆಕ್ಕಗಳು ಯಾವ ಟ್ರಸ್ಟುಗಳಿಗೆ ಲಗಾವಾಗುತ್ತವೋ ಆ ಎಲ್ಲಾ ಟ್ರಸ್ಟು ಆಸ್ತಿಗಳಿಂದ ಅಂಥಾ ಪ್ರತಿಯೊಂದು ಟ್ರಸ್ಟು ಆಸ್ತಿಯಲ್ಲಿ ಜರಗಿಸಲ್ಪಟ್ಟ ಲೇವಾದೇವಿಗಳ ಪರಿಮಿತಿಯ ದಾವಾಶೆಯಲ್ಲಿ ಸಲ್ಲಿಸಲ್ಪಡತಕ್ಕದ್ದು. ಈ ದಾವಾಶೆಯು ಆಡಿಟರನಿಂದ – ಯಾ – ಆಡಿಟರರಿಂದ ಗೊತ್ತುಮಾಡಲ್ಪಟ್ಟು ನಿಷ್ಕರ್ಷಿಸಲ್ಪಡತಕ್ಕದ್ದು ಮತ್ತು ಅಫಿಷಿಯಲ್ ಟ್ರಸ್ಟಿಯು ಸದರೀ ಎಸ್ಟೇಟುಗಳಿಂದ ಅದಕ್ಕನುಸಾರವಾಗಿ ಸಾವತಿಮಾಡತಕ್ಕದ್ದು. ಪರಂತು ಅರ್ಧ ವರ್ಷದಲ್ಲಿ ರೂ. 100 ಕ್ಕಿಂತ ಕಡಿಮೆ ಆದಾಯವುಳ್ಳ ಎಸ್ಟೇಟುಗಳು ಮೇಲಿನ ಖರ್ಚುಗಳ ಯಾವ ಭಾಗವನ್ನಾದರೂ ತೆರುವದರಿಂದ ವಿನಾಯಿಸಲ್ಪಡತಕ್ಕದ್ದು.

ಪರಂತು ಸೆಕ್ಯೂರಿಟಿಗಳನ್ನು ಹಣವಾಗಿ ಅಥವಾ ಹಣವನ್ನು ಸೆಕ್ಯೂರಿಟಿಗಳಾಗಿ ಮಾರ್ಪಡಿಸಿದ ಮಾತ್ರದಿಂದ ಅಥವಾ ಸೆಕ್ಯೂರಿಟಿಯನ್ನು ಬದಲಾಯಿಸಿದ ಮಾತ್ರದಿಂದ ಅದು ಈ ಒಳಕ್ರಮದಮೇರೆಗೆ ಒಂದು ಲೇವಾದೇವಿ ಎಂಬುದಾಗಿ ಭಾವಿಸಲ್ಪಡತಕ್ಕದ್ದಲ್ಲ.

(5) ಒಂದು ಟ್ರಸ್ಟು ಎಸ್ಟೇಟಿನ ಕಾರ್ಯನಿರ್ವಾಹವು ಬಹುಶಃ ಮುಗಿಯೆಲಿಕ್ಕಿರುವಾಗ ಅಫಿಷಿಯಲ್ ಟ್ರಸ್ಟಿಯು ಸದರೀ ಆಸ್ತಿಯ ವಿಷಯದಲ್ಲಿ ಮೇಲಿನ (4) ನೇ ಒಳ ಕ್ರಮದಲ್ಲಿ ಹೇಳಿರುವ ಖರ್ಚು – ವೆ–ವೆಚ್ಚಗಳನ್ನು ಸಲಾಯಿಸಿಕೊಳ್ಳುವಬಗ್ಗಾಗಿ ತಾನು ಇಟ್ಟುಕೊಳ್ಳತಕ್ಕ ಖಂಡಿತವಾದ ಒಂದು ಮೊಬಲಗನ್ನು ಗೊತ್ತುಮಾಡಿ ನಿಶ್ಚೈಸಬೇಕಾಗಿ ಆಡಿಟರನನ್ನು –ಯಾ–ಆಡಿಟರರನ್ನು ಕೇಳಿಬಹುದು. ಈ ಮೇರೆಗೆ ಆಡಿಟರನಿಂದ – ಯಾ – ಆಡಿಟರರಿಂದ ಗೊತ್ತುಮಾಡಲ್ಪಟ್ಟ ಮೊಬಲಗು ಸದರೀ ಎಸ್ಟೇಟಿನಿಂದ ಸಲ್ಲಬೇಕಾಗಿರುವ ಮೇಲಿಹೇಳಿದ ಖರ್ಚುಗಳ ದಾವಾಶೆ ಎಂಬುದಾಗಿ ವರ್ತಿಸಲ್ಪಡತಕ್ಕದ್ದು.

ಕ್ರಮ VI.—(1) ಯಾವ ಮನುಷ್ಯನಾದರೂ ತಾನು ಸಂದರ್ಶಿಸಲು ಅಪೇಕ್ಷಿಸುವ ಪುಸ್ತಕಗಳು – ಯಾ – ಲೆಕ್ಕಗಳು – ಯಾ – ಇತರ ಪತ್ರಗಳು ಸಂಬಂಧಪಡುವ ಟ್ರಸ್ಟಿನ ಒಬ್ಬ ಫಲಾನುಭೋಗಿಯಾಗಿರುತ್ತೇನೆಂದು ಅಫಿಷಿಯಲ್ ಟ್ರಸ್ಟಿಗೆ ಪ್ರಥಮತಃ ಸಮಾಧಾನಪಡಿಸಿದ ವಿನಾ, ಅಫಿಷಿಯಲ್ ಟ್ರಸ್ಟಿಯ ಪುಸ್ತಕಗಳನ್ನಾಗಲಿ ಲೆಕ್ಕಗಳನ್ನಾಗಲಿ ಅಥವಾ ಆತನಲ್ಲಿ ನಿವಿಷ್ಟವಾಗಿರುವ ಟ್ರಸ್ಟುಗಳಿಗೆ ಸಂಬಂಧಪಡುವ–ಯಾ–ಅವುಗಳ ವಿಷಯವಾದ ಪುಸ್ತಕಗಳನ್ನು, ಲೆಕ್ಕಗಳನ್ನು – ಯಾ – ಇತರ ಪತ್ರಗಳನ್ನಾಗಲಿ ಸಂದರ್ಶಿಸಲು ಅರ್ಹನಾಗಿರತಕ್ಕದ್ದಲ್ಲ.

(2) ಅಂಥಾ ಸಂದರ್ಶನೆಯನ್ನು ಮಾಡಲು ಅಪೇಕ್ಷಿಸುವ ಪ್ರತಿ ಬೆನಿಫಿಶಿಯರಿಯು ತಾನು ಯಾವ ದಿವಸದಲ್ಲಿ ಸಂದರ್ಶನೆ ಮಾಡಲು ಅಪೇಕ್ಷಿಸುತ್ತಾನೋ ಆ ದಿವಸದ ಕನಿಷ್ಠ ಪಕ್ಷ ಇಡೀ ಒಂದು ದಿವಸಕ್ಕೆ ಮುಂಚಿತವಾಗಿ, ಈಕೆಳಗಿನ ತಪಸೀಲುಗಳನ್ನು, ಎಂದರೆ—

(a) ತನ್ನ ಹೆಸರು – ವೆ – ಮೇಲ್ ವಿಳಾಸವನ್ನೂ,

(b) ಯಾವ ಟ್ರಸ್ಟಿನ ವಿಷಯವಾಗಿ ಸಂದರ್ಶನೆಮಾಡಬೇಕೆಂದು ಅಪೇಕ್ಷಿಸುತ್ತಾನೋ ಆ ಟ್ರಸ್ಟಿನ ಹೆಸರನ್ನೂ,

(c) ಅಂಥಾ ಟ್ರಸ್ಟಿನಲ್ಲಿ ತನಗಿರುವ ಹಕ್ಕಿನ ಸ್ವಭಾವವನ್ನೂ,

(d) ತಾನು ಯಾವ ತಾರೀಖಿನಲ್ಲಿ ಸಂದರ್ಶಿಸಲು ಅಪೇಕ್ಷಿಸುತ್ತಾನೋ ಆ ತಾರೀಖನ್ನೂ,

ನಮೂದಿಸಿ ಬರಹಮೂಲವಾಗಿ ಅಫಿಷಿಯಲ್ ಟ್ರಸ್ಟಿಯಬಳಿಗೆ ಅರ್ಜಿಮಾಡತಕ್ಕದ್ದು.

ಆತನು ಅರ್ಜಿಯ ಸಂಗಡ 1 ರೂಪಾಯಿ ಕನಿಷ್ಠ ಫೀಸನ್ನು ಸಹಾ ಶೇವಣಿ ಇಡತಕ್ಕದ್ದು. ಸಂದರ್ಶನೆಗೆ ಅನುಮತಿ ಕೊಡಲ್ಪಡದಿದ್ದರೆ ಅದು ಅರ್ಜಿದಾರನಿಗೆ ವಾಪಸುಕೊಡಲ್ಪಡುವದು.

(3) ಅಫಿಷಿಯಲ್ ಟ್ರಸ್ಟಿಯು ಸದರೀ ಟ್ರಸ್ಟಿನಲ್ಲಿ – ಯಾ – ಪ್ರಸಕ್ತ ವಿಷಯದಲ್ಲಿ ಅರ್ಜಿದಾರನ ಹಕ್ಕು ಬಾಧ್ಯತೆಯ ಕುರಿತು – ವೆ – ಆತನ ಪ್ರಾಮಾಣಿಕತೆಯ ಕುರಿತು ಸಹಾ ಸಮಾಧಾನಪಟ್ಟ ಬಳಿಕ, ತಾನು ಯುಕ್ತವೆಂದು ತಿಳಕೊಳ್ಳುವಂಥ ಮೇಲ್ವಿಚಾರದೊಳಗೆ ಅರ್ಜಿದಾರನು ಸಂದರ್ಶಿಸುವಬಗ್ಗೆ ಅರ್ಜಿಯಲ್ಲಿ ಕಾಣಿಸಿದ ತಾರೀಖಿನಲ್ಲಿ ಒಂದು ಘಂಟೆಯನ್ನು ನಿಶ್ಚೈಸತಕ್ಕದ್ದು. ಸಾಕಾದೆ ಯಾವದೊಂದು ಕಾರಣದಿಂದ ಅರ್ಜಿದಾರನು ಸೂಚಿಸಿದ ದಿವಸದಲ್ಲಿ ಸಂದರ್ಶಿಸಲು ಅವಕಾಶಕೊಡಲಿಕ್ಕಾಗದಿದ್ದರೆ, ಅರ್ಜಿದಾರನಿಗೆ ಅನುಕೂಲವಿರುವ ಮತ್ತೊಂದು ದಿವಸ-ವೆ-ಘಂಟೆಯನ್ನು ಅಫಿಷಿಯಲ್ ಟ್ರಸ್ಟಿಯು ನಿಶ್ಚೈಸತಕ್ಕದ್ದು.

(4) ಅರ್ಜಿದಾರನು, ಅಫಿಷಿಯೆಲ್ ಟ್ರಸ್ಟಿಯ ಕೈವಶದಲ್ಲಿದ್ದು (ಕಾರ್ಯನಿರ್ವಾಹವು) ಅಂತ್ಯವಾಗದಿರುವ ಟ್ರಸ್ಟು ಆಸ್ತಿಗಳ ವಿಷಯವಾಗಿ ತಾನು ಮಾಡುವ ಸಂದರ್ಶಣೆಯ ಪ್ರತಿ ಅರ್ಧ ಘಂಟೆ - ಯಾ - ಅದರ ಭಿನ್ನಾಂಶದಬಗ್ಗೆ ರೂ- 1 ರ ಪ್ರಕಾರ ಗೊತ್ತುಮಾಡಲ್ಪಡುವ ಒಂದು ಫೀಸನ್ನು ಪಾವತಿಮಾಡತಕ್ಕದ್ದು- ಅಂತ್ಯವಾದ ಟ್ರಸ್ಟು ಆಸ್ತಿಗಳ ಸಂಗತಿಯಲ್ಲಿ ಅಂಥಾ ಸಂದರ್ಶಣೆಯ ಬಗ್ಗೆ ಕೊಡಬೇಕಾದ ಫೀಸು ಪ್ರತಿ ಅರ್ಧ ಘಂಟೆಗೆ - ಯಾ - ಅದರ ಭಿನ್ನಾಂಶದಬಗ್ಗೆ ರೂ- 2 ರಂತೆ ಗಣಿಸಲ್ಪಡತಕ್ಕದ್ದು-

(5) ಅಫಿಷಿಯೆಲ್ ಟ್ರಸ್ಟಿಯ ಲೆಕ್ಕಗಳ ಅಥವಾ ಅಫಿಷಿಯೆಲ್ ಟ್ರಸ್ಟಿಯಲ್ಲಿ ನಿವಿಷ್ಟವಾಗಿರುವ ಟ್ರಸ್ಟುಗಳಿಗೆ ಸಂಬಂಧಪಡುವ - ಯಾ - ಅವುಗಳ ವಿಷಯವಾದ ಪುಸ್ತಕಗಳ, ಲೆಕ್ಕಗಳ - ಯಾ - ಇತರ ದಸ್ತಾವೇಜುಗಳ ನಕಲುಗಳನ್ನು - ಯಾ - ಎಕ್‌ಸ್ಟ್ರಾ)ಕ್ಟ್ಸ್‌ಗಳನ್ನು ಅಥವಾ ಆಡಿಟರನ ರಿಪೋರ್ಟುಗಳ - ಯಾ - ಸರ್ಟಿಫಿಕೇಟುಗಳ ನಕಲುಗಳನ್ನು - ಯಾ - ಎಕ್‌ಸ್ಟ್ರಾ)ಕ್ಟ್ಸ್‌ಗಳನ್ನು ಯಾವ ಮನುಷ್ಯನಾದರೂ ಈ ಕ್ರಮದ ಹಿಂದಿನ ಕ್ಲಾಜುಗಳಮೇರೆಗೆ ಆತನು ಸಂದರ್ಶಣೆಮಾಡಲು ಅರ್ಹನಾಗಿರುವ ಒಬ್ಬ ಮನುಷ್ಯನಾಗಿದ್ದ ವಿನಾ ಹೊಂದಿಲು ಅರ್ಹನಾಗಿರುವದಿಲ್ಲ-

(6) ಕೊಡೋಣಾಗುವ ಪ್ರತಿ ನಕಲಿನ -ಯಾ- ಎಕ್‌ಸ್ಟ್ರಾ)ಕ್ಟ್ಸಿನಬಗ್ಗಾಗಿ 72 ಶಬ್ದಗಳಿರುವ ಒಂದು ಫೋಲಿಯೋವಿಗೆ 4 ಆಣೆಯ ದರದಲ್ಲಿ ಗೊತ್ತುಮಾಡಲ್ಪಡುವ ಒಂದು ಫೀಸನ್ನು ಹೊರಿಸತಕ್ಕದ್ದು ; ಮತ್ತು ಅಂಥಾ ಯಾವದಾದರೂ ನಕಲು - ಯಾ - ಎಕ್‌ಸ್ಟ್ರಾ)ಕ್ಟ್ಸ "ಯಥಾರ್ಥವಾದ ನಕಲು" ಎಂಬುದಾಗಿ ಅಫಿಷಿಯೆಲ್ ಟ್ರಸ್ಟಿಯು ದೃಢಪಡಿಸಬೇಕಾದ ಪಕ್ಷದಲ್ಲಿ ಹೆಚ್ಚಿಗೆ ಫೀಸು ರೂ- 1 ನ್ನು ವಸೂಲುಮಾಡತಕ್ಕದ್ದು-

ಕ್ರಮ VII-—(1) ಫಲಾನುಭೋಗಿಯಾಗಿ ಅರ್ಹರಾಗಿರುವ ಮನುಷ್ಯನು - ಯಾ - ಮನುಷ್ಯರು ಯಾರು ಎಂಬುದರ ಕುರಿತು ಸಂದೇಹಗಳು - ಯಾ - ವಿವಾದಗಳು ಇದ್ದದರಿಂದ - ಯಾ - ಅನ್ಯಥಾ ಯಾವ ದೊಂದು ಕಾರಣದಿಂದ ಯಾವದೊಂದು ಟ್ರಸ್ಟು ಎಸ್ಟೇಟಿಗೆ ಸಂಬಂಧಪಟ್ಟು ರೂ- 100 ಸಿಲಕು ಬಾಕಿಯು ಅಫಿಷಿಯೆಲ್ ಟ್ರಸ್ಟಿಯ ಕೈವಶದಲ್ಲಿ ನಿಂತಾಗಲೆಲ್ಲಾ, ಆತನು, ಈ ಕುರಿತು ಟ್ರಸ್ಟು ಪತ್ರದಲ್ಲಿ - ಯಾ - ಇತರ ಡಿಕ್ಲರೇಷನಿನಲ್ಲಿ ಯಾವ ಅನುಜ್ಞೆಗಳೂ ಇಲ್ಲದಿರುವ ಪಕ್ಷದಲ್ಲಿ ವಿಳಂಬ ಮಾಡದೆ ಅದನ್ನು ಗವರ್ನ್‌ಮೆಂಟ್ ಸೆಕ್ಯೂರಿಟಿಗಳಲ್ಲಿ ಅಥವಾ (1882 ನೇ ಇಸವಿಯ ನಂ. 2 ನೇ) ಇಂಡಿಯದ ಟ್ರಸ್ಟು ಆಕ್ಟಿನ - ಯಾ - ಅದರ ಯಾವದಾದರೂ ತಿದ್ದುಪಡಿಯ ಆಕ್ಟಿನ ನಿಬಂಧನೆಗಳಮೇರೆಗೆ ಟ್ರಸ್ಟಿಗಳು ಸಂಚಯಕ್ಕಿಡಲು ಅಧಿಕಾರವಿರುವ ಯಾವವಾದರೂ ಸೆಕ್ಯೂರಿಟಿಗಳಲ್ಲಿ ಸಂಚಯಕ್ಕಿಡತಕ್ಕದ್ದು- ಪರಂತು ಹೈಕೋರ್ಟಿನವರ ಅನುಮತಿಯನ್ನು ಮುಂಚಿತವಾಗಿ ಪಡೆದೆ ವಿನಾ ಅಫಿಷಿಯೆಲ್ ಟ್ರಸ್ಟಿಯು ಸ್ಥಿರ ಆಸ್ತಿಯ ಅಡಮಾನದಮೇಲೆ ಸಂಚಯಕ್ಕಿಡತಕ್ಕ ದ್ದಲ್ಲ-

(2) ಯಾವದೊಂದು ಟ್ರಸ್ಟು ಆಸ್ತಿಯಬಗ್ಗಾಗಿ ಇಂಡಾರ್ಸು ಮೂಲವಾಗಿ - ಯಾ - ಅನ್ಯಥಾ ಅಫಿಷಿಯೆಲ್ ಟ್ರಸ್ಟ್ಯಿಗೆ ಸಾದರುಮಾಡಲ್ಪಡಬಹುದಾದ, ಒಪ್ಪಿಸಲ್ಪಡಬಹುದಾದ - ಯಾ - ವರ್ಗಾಯಿಸಲ್ಪಡ ಬಹುದಾದ ಯಾವತ್ತು ಗವರ್ನ್‌ಮೆಂಟ್ ಸೆಕ್ಯೂರಿಟಿಗಳನ್ನು ಮತ್ತು ಇತರ ಸೆಕ್ಯೂರಿಟಿಗಳನ್ನು ಆತನ ಉದ್ಯೋಗದ ಹೆಸರಲ್ಲಿ ಸಾದರುಮಾಡಿಸಿ, ಒಪ್ಪಿಸಿ - ಯಾ - ವರ್ಗಾಯಿಸಿ ಕೊಡುವಂತೆ ಮಾಡತಕ್ಕದ್ದು-

(3) ಅಫಿಷಿಯೆಲ್ ಟ್ರಸ್ಟಿಯು ನಗದಿಯಿಂದ ಯಾವ ಕಾಲದಲ್ಲಾದರೂ ರೂ- 300 ಕ್ಕಿಂತ ಅಧಿಕವಾಗಿ ತನ್ನ ಕೈಯಲ್ಲಿ ಇರಿಸಿಕೊಳ್ಳತಕ್ಕದ್ದಲ್ಲ- ಆತನು ಅಂಗೀಕರಿಸುವ ಸಮಸ್ತ ಮೊಬಲಗುಗಳನ್ನು ಅಫಿಷಿಯೆಲ್ ಟ್ರಸ್ಟ್ಯಿಗಾಗಿ ತೆರೆಯುವ ಒಂದು ಪ್ರತ್ಯೇಕ - ವ - ಅಲಾಹಿದಾ ಲೆಕ್ಕದಲ್ಲಿ ಜಮಾ ದಾಖಲುಮಾಡುವಂತೆ ಆಗಿಂದಾಗ್ಗೆ ಮದ್ರಾಸ್ ಬ್ಯಾಂಕಿನಲ್ಲಿ ಇಡತಕ್ಕದ್ದು ಮತ್ತು ಅವಕ್ಯವಿದ್ದಾಗ ತನ್ನ ಹುದ್ದೆಯ ಹೆಸರಿನಿಂದ ತರಿಸಿಕೊಳ್ಳತಕ್ಕದ್ದು-

(4) ಅಫಿಷಿಯೆಲ್ ಟ್ರಸ್ಟಿಯ ಸ್ವಾಧೀನತೆಗೆ ಬರುವ ಎಲ್ಲಾ ಗವರ್ನ್‌ಮೆಂಟ್ ಸೆಕ್ಯೂರಿಟಿಗಳನ್ನು, ಮತ್ತು ಬ್ಯಾಂಕ್, ರೈಲ್ವೆ - ಯಾ - ಇತರ ಶೇರ್ಸುಗಳನ್ನು ಆತನು ಒಡನೆಯೇ ಮದ್ರಾಸ್ ಬ್ಯಾಂಕಿನಲ್ಲಿ ಅಫಿಷಿಯೆಲ್ ಟ್ರಸ್ಟ್ಯಿಯಾಗಿ ತನ್ನ ಹೆಸರಲ್ಲಿ ಕೇವಣಿಯಿಡತಕ್ಕದ್ದು ಮತ್ತು ಹಂಗಾಮಿಯಾಗಿ ಯಾವದೊಂದು ಉದ್ದೇಶದಬಗ್ಗೆ ಸದರೀ ಸೆಕ್ಯೂರಿಟಿಗಳನ್ನು - ಯಾ - ಶೇರ್ಸುಗಳನ್ನು ತಾನು ಇಟ್ಟುಕೊಳ್ಳುವದು ಅಗತ್ಯವಿರುವ ಸಂಗತಿಗಳಲ್ಲಿ ಹೊರತು ಅನ್ಯಥಾ ಅವುಗಳನ್ನು ಭದ್ರವಾಗಿಟ್ಟುಕೊಳ್ಳುವಬಗ್ಗಾಗಿ ಅಲ್ಲಿ ಇರಿಸತಕ್ಕದ್ದು-

ಕ್ರಮ VIII-—(1) ಯೂರೋಪಿನಲ್ಲಿ ವಾಸವಾಗಿರುವ ಮನುಷ್ಯರಿಗೆ ಪಾವತಿಯಾಗತಕ್ಕ - ಯಾ - ಸಂಬಂಧಿಸುವ ಮೊಬಲಗುಗಳನ್ನು ಲಂಡನಿನಲ್ಲಿ ಇಂಡಿಯಾ ಆಫೀಸಿಗೆ ಕಳುಹಿಸುವಾಗ ಅಥವಾ ಇತರ ಸಂಗತಿಗಳಲ್ಲಿ ಆಮೇರೆಗೆ ಕಳುಹಿಸುವದು ಅಗತ್ಯವಾದಾಗ, ಆಲೋಚನಾ ಸಭೆಯೊಳಗಣ ಗವರ್ನರ್‌ರವರು ಆಗಿಂದಾಗ್ಗೆ ಮಂಜೂರುಮಾಡುವಂಥ ಬ್ಯಾಂಕುಗಳಲ್ಲಿಕೆ ಯಾವದೊಂದು ಬ್ಯಾಂಕಿನಿಂದ ಕೊಡೋಣಾಗುವ ಲಂಡನಿನಲ್ಲಿ ಕೇಳಿದಾಗ ಪಾವತಿಯಾಗತಕ್ಕ ಬಿಲ್ಸ್ ಆಫ್ ಎಕ್ಸ್‌ಚೇಂಜ್ ಎಂಬ ಹುಂಡಿಗಳನ್ನು ಕೊಂಡುಕೊಳ್ಳುವ

ಮೂಲವಾಗಿ ಮಾಡತಕ್ಕದ್ದು - ಈ ಕ್ರಮದ ಉದ್ದೇಶಾರ್ಥವಾಗಿ ಒಂದು ಬ್ಯಾಂಕಿನ – ಯಾ – ಬ್ಯಾಂಕು ಗಳ ವಿಷಯವಾಗಿ ಕೊಡಲ್ಪಡುವ ಪ್ರತಿ ಮಂಜೂರಾತಿಯು ಮದ್ರಾಸ್ ಗವರ್ನ್‌ಮೆಂಟಿನವರ ಒಬ್ಬ ಸೆಕ್ರೆಟರಿ ಯಿಂದ ದಸ್ಕತುಮಾಡಲ್ಪಟ್ಟು ಬರಹಮೂಲವಾದ ಒಂದು ಹುಕುಮಿನ ಮೂಲವಾಗಿ ಕೊಡಲ್ಪಡತಕ್ಕದ್ದು ಮತ್ತು ಅದೇಮೇರೆಗಿನ ಒಂದು ಹುಕುಮಿನ ಮೂಲವಾಗಿ ರದ್ದಾಗುವ ತನಕ ಜಾರಿಯಲ್ಲಿರತಕ್ಕದ್ದು -

(2) ಇತರ ಸಂಗತಿಗಳಲ್ಲಿ ಹಣ ಪಡಕೊಳ್ಳುವವನು ತಿಳಿಸುವ ರೀತಿಯಲ್ಲಿ, ಮತ್ತು ಆ ರೀತಿ ತಿಳಿ ಸದೆ ಇದ್ದ ಪಕ್ಷದಲ್ಲಿ ಟಪ್ಪಾಲು ಮನಿ ಆರ್ಡರು ಮುಖಾಂತರವಾಗಿ ಅವನ್ನು ಕಳುಹಿಸತಕ್ಕದ್ದು -

ಕ್ರಮ IX-—(1) ಆಕ್ಟಿನ 23 ನೇ ಪ್ರಕರಣದಮೇರೆಗೆ ಇಂಡಿಯಾ ಗವರ್ನ್‌ಮೆಂಟಿನವರ ಜಮೆಗೆ ದಾಖಲುಮಾಡತಕ್ಕ ಎಲ್ಲಾ ಹಣಗಳನ್ನು, ಅಫಿಷಿಯಲ್ ಟ್ರಸ್ಟಿಯು ಮದ್ರಾಸ್ ಬ್ಯಾಂಕಿನಲ್ಲಿ ಅವರ ಜಮೆಗೆ ಪಾವತಿಮಾಡತಕ್ಕದ್ದು -

(2) ಆಕ್ಟಿನ 24 ನೇ ಪ್ರಕರಣದ (1) ನೇ ಕ್ಲಾಜಿನ ನಿಬಂಧನೆಗಳಿಗನುಸಾರವಾಗಿ ಅವುಗಳ ಪಾವ ತಿಯನ್ನು ಹೊಂದಲು ದಾವೆಮಾಡುವ ಯಾವನೊಬ್ಬ ಮನುಷ್ಯನು ಗವರ್ನ್‌ಮೆಂಟಿನವರಿಗೆ ಸಮಾಧಾನವಾಗುವ ರೀತಿಯಲ್ಲಿ ತನ್ನ ದಾವೆಯನ್ನು ರುಜುಪಡಿಸತಕ್ಕದ್ದು -

ಕ್ರಮ X-—ಅಫಿಷಿಯಲ್ ಟ್ರಸ್ಟಿಯು, ಮತಸಂಬಂಧವಾದ ಒಂದು ಸಂಸ್ಥಾಪನೆಯ ಅಥವಾ ವ್ಯಾಪಾರ ಸಂಬಂಧವಾದ ಒಂದು ವಹಿವಾಟಿನ ಸ್ವತ್ತನ್ನು ಭದ್ರವಾಗಿಟ್ಟುಕೊಳ್ಳುವೆಗೋಸ್ಕರ - ವ - ಸಂಚಯಕ್ಕೆಡುವ ಗೋಸ್ಕರ ಅಥವಾ ಅಂಥಾ ಸಂಸ್ಥಾಪನೆಯ – ಯಾ - ವಹಿವಾಟಿನ ಲೇಣೇದಾರರ ಹಕ್ಕುಗಳನ್ನು ಕಾಪಾಡು ವದಕ್ಕೋಸ್ಕರ ಇರಾಧಿಸಲ್ಪಟ್ಟ ಯಾವದಾದರೂ ಟ್ರಸ್ಟನ್ನು ವಹಿಸಿಕೊಳ್ಳಬಹುದು, ಪರಂತು ಅಂಥಾ ಮತ ಸಂಬಂಧವಾದ - ಯಾ - ಧರ್ಮಸಂಬಂಧವಾದ ಸಂಸ್ಥಾಪನೆಯ ಉದ್ದೇಶಗಳನ್ನು ಸರಿಯಾಗಿ ನಿರ್ವಹಿಸುತ್ತಾರೋ - ಯಾ - ನೆರವೇರಿಸುತ್ತಾರೋ ಎಂಬುದನ್ನು ನೋಡಲು ಅಥವಾ ಅಂಥಾ ವ್ಯಾಪಾರಸಂಬಂಧವಾದ ವಹಿವಾಟಿನ ಆಡಳಿತಗಳು - ಯಾ – ಕೆಲಸವು ಸರಿಯಾಗಿ ನಿರ್ವಹಿಸಲ್ಪಡುತ್ತದೋ ಎಂಬುದನ್ನು ನೋಡಲು ಆತನು ಬದ್ಧನಾಗಿರುವದಿಲ್ಲ -

ಕ್ರಮ XI-—ಆಕ್ಟಿನ 9 ನೇ ಪ್ರಕರಣದಮೇರೆಗೆ ಒಂದು ಉಯಿಲಿನ ಮತಲಬ್ಬನ್ನು ತಿಳಿಯಪಡಿಸೋಣವು, ಅಫಿಷಿಯಲ್ ಟ್ರಸ್ಟೀಗೆ ಅಸ್ಸೆಲ್ ಉಯಿಲನ್ನಾಗಲಿ ಅದರ ಪ್ರೊಬೇಟ್ ಕಾಪಿಯನ್ನಾಗಲಿ ಕಳುಹಿಸಿ ಕೊಡುವದರ ಮೂಲಕ ಜರಗಿಸಲ್ಪಡತಕ್ಕದ್ದು -

ಕ್ರಮ XII-—ಅಫಿಷಿಯಲ್ ಟ್ರಸ್ಟಿಯು ತನ್ನ ಕೈವಶದಲ್ಲಿರುವ ಯಾವವಾದರೂ ಟ್ರಸ್ಟುಗಳ ಲೆಕ್ಕ ಗಳನ್ನು ಮುಕ್ತಾಯಪಡಿಸಿದ ತರುವಾಯ ಟ್ರಸ್ಟಿನೊಂದಿಗೆ ತನ್ನ ವಶಕ್ಕೆ ಬಂದ ಯಾವವಾದರೂ ಖಾಸಗಿ ಕಾಗದ ಪತ್ರಗಳನ್ನು, ಬಿಲ್ಲುಗಳನ್ನು, ರಸೀದಿಗಳನ್ನು, ಯಾದಾಸ್ತುಗಳನ್ನು ಮತ್ತು ಏನೊಂದೂ ಮೌಲ್ಯ ವಿಲ್ಲದ ಅದೇ ಮೇರೆಗಿನ ಇತರ ದಸ್ತಾವೇಜುಗಳನ್ನು ಆಮೇರೆಗೆ ಮುಕ್ತಾಯಪಡಿಸಿದಬಳಿಕ ಮೂರು ತಿಂಗ ಳೊಳಗೆ ಅವುಗಳಿಗೆ ಅರ್ಹರಾಗಿರುವ ಫಲಾನುಭೋಗಿಗಳಾಗಲಿ ಇತರ ಮನುಷ್ಯರಾಗಲಿ ಕೇಳದಿದ್ದ ಪಕ್ಷದಲ್ಲಿ ಆ ವುಗಳನ್ನು ನಾಶಪಡಿಸಿಬಹುದು -

ಕ್ರಮ XIII-—ಗವರ್ನ್‌ಮೆಂಟಿನವರ ಸ್ಯಾಂಕ್ಷನು ಇಲ್ಲದೆ, ಅಫಿಷಿಯಲ್ ಟ್ರಸ್ಟಿಯು ತನ್ನ ತಾಬೆಯ ಲ್ಲಿರುವ ಯಾವದೊಂದು ಎಸ್ಟೇಟಿಗೆ ಸಂಬಂಧಪಟ್ಟ ಯಾವದೊಂದು (ವ್ಯಾಜ್ಯ) ವ್ಯವಹಾರದಲ್ಲಿ ಅಂಥಾ ವ್ಯವ ಹರಣೆಯ ಖರ್ಚು ಈಮೊದಲೇ ತನ್ನ ಕೈವಶದಲ್ಲಿರುವ ಅಸ್ಸೆಟುಗಳಿಗಿಂತ ಅಧಿಕವಾಗುವ ಪಕ್ಷದಲ್ಲಿ, ಅಂಥಾ ಖರ್ಚುಗಳ ವಿಷಯವಾಗಿ ನಷ್ಟಭರ್ತಿಯಿಗೆ ಕ್ರಮವಾದ ಮತ್ತು ಸಮರ್ಪಕವಾದ ಜಾಮೀನು ಕೊಡ ಲ್ಪಟ್ಟಿದ್ದರೇನೇ ವಿನಾ, ಪ್ರವೇಶಿಸತಕ್ಕದ್ದಲ್ಲ -

ಟಿಪ್ಪಣಿ-—" ಕ್ರಮವಾದ ಮತ್ತು ಸಮರ್ಪಕವಾದ ಜಾಮೀನು " ಎಂದರೆ ಬಹುಕಃ ಸಂಭವಿಸಬಹುದಾದ ಸಮಸ್ತ ಖರ್ಚುಗಳ ಭರ್ತಿಗಾಗಿ ಜಾಮೀನು ಎಂಬ ಅರ್ಥವು ಮತ್ತು ಅದು ಅಫಿಷಿಯಲ್ ಟ್ರಸ್ಟಿಯಿಂದ ನಿರ್ಣ ಯಿಸಲ್ಪಡುವ ಒಂದು ಮೊಬಲಗಿನ ಗವರ್ನ್‌ಮೆಂಟ್ ಸೆಕ್ಯೂರಿಟಿಗಳ, ರೊಕ್ಕ ಹಣದ – ಯಾ – ಆಭರಣಗಳ ಡಿಪಾಜಿಟು ರೂಪವಾಗಿ ಇರತಕ್ಕದ್ದು -

ಆರ್. ರಾಮಚಂದ್ರ ರಾವ್,
ಗವರ್ನ್‌ಮೆಂಟ್ ಸೆಕ್ರೆಟರಿ.

(A true translation)

B. RAMA RAU,
Kanarese Translator to Government.

PRINTED BY THE SUPERINTENDENT, GOVERNMENT PRESS, MADRAS, AND PUBLISHED BY THE TREASURY DEPUTY COLLECTOR OF THE DISTRICT.

G. R. S. VI—G/32]

SUBJECT.....

.....

.....

Diary No. of letter replied to... 22409

GENERAL AND REVENUE SECRETARIAT

( )

the *191* .

Date of issue.....

Signed by.....

Section C 7

File No. [illegible]

Serial No. 4

No. Sri. 365

To

The F. A Resident in Mysore.

Sir,

With reference to your letter No. 4812 of the 4th June 1920, ~~forwarding~~ ~~with which you~~ ~~specially asked~~ ~~Copies of pamphlet~~ I am directed to acknowledge with thanks the receipt of:-

200 Copies of Official Trustee Rules in English

& 200 ——— in Kannada

I have &c

D. M.
10/6/20
For Chief Secy

over.

KR
10/6/1920

28/6

5 drafts

(1)

G. R. S. VI—G/32]

SUBJECT.....

.....

.....

Diary No. of letter replied to 22409

GENERAL AND REVENUE SECRETARIAT,

( )

, the 191

Date of issue 1/7

Signed by M Rao

80 in English &
80 in Kannada Canarese.

Section C5
File No. 178-29
Serial No. 5

No. G.16 (160)

To

The Registrar, Chief Court of Mysore,

Sir,

I am directed to forward herewith ~~Marginally noted number of~~ copies of the revised rules in the Official Trustee's Office, Madras as noted in the margin for distribution to all the Civil & Criminal Courts in the State ~~with a request that the contents thereof may be given as wide publicity~~.

I have &c

M Rao
28/6 For Chief Secy

over.

17/6/1920

(2) 9

G. R. S. VI—G/32]

SUBJECT.....

.....

.....

Diary No. of letter replied to....22409

GENERAL AND REVENUE SECRETARIAT,

( )

, *the* 191

Date of issue..... 1/7

Signed by..... M. Rao

Section C4

File No. 178-79

Serial No. 6

No. G17(200)

To

The Revenue Commissioner in Mysore

Sir,

I am directed to forward herewith marginally noted Number of Copies of the revised rules on the Official Masters as noted in the margin Office, Madras, for distribution to all the Dy Commissioners & Asst. Commissioners in the State, with a request that the Contents thereof may be given a wide publicity.

I have &c

28/4

For Chief Secy

100 Copies in English

100 Copies in Kannada

Kannada

(3)

G. R. S. VI—G/32]

SUBJECT.....

.....

.....

Diary No. of letter replied to 22109

GENERAL AND REVENUE SECRETARIAT,

( )

, *the* 191

Date of issue 1/7

Signed by M. Pai

Section Ch

File No. 178-19

Serial No. 7

No. 618(2)

To

The Secretary, Chamber of Commerce

Bangalore

Sir,

I am directed to send herewith, for your information, two copies of the revised rules on the Official Duties Office, Madras, both in English and in Kannada Canarese, and to request that the contents hereof may be circulated among the members.

I have &c.

D. M.

28/6

By Chief Secy

17/7/20

17/7/20

(4) (11)

G. R. S. VI—G/32]

SUBJECT.....

.....

.....

Diary No. of letter replied to....22409

GENERAL AND REVENUE SECRETARIAT,

( )

, the 191

Date of issue.....1/7.....

Signed by.....M. Rao.....

Section Ch.

File No. 178—29

Serial No. 1

No. 419(2)

To

The Manager, Bank of Mysore

Bangalore

Sir,

I am directed to forward herewith for information 2 copies of the revised rates on the Official Basket Office, Madras, both in English & in Kannada ~~Canarese~~, ~~for wide circulation & publicity~~

I have the

honour

to be

Sir

Your obedient servant

28/6

for Chief Secy

17/6/20 Jpr 21/6

over.

G.R.S. VI–71]

SUBJECT.....

.....

.....

Diary No. of letter replied to 2214.09

General and Revenue Secretariat

( )

, *the* 191 .

Date of issue 1/7

Signed by M. Rm

May this be

i Printed ?

treated as a standing order ?

published in the Gazette, English Part ?

translated ?

v placed at the disposal of the press ?

vi published in the Gazette, Kannada Part ?

Section Ch.

File No. 178–19

Serial No. 9

Proceedings of the Government of His Highness the Maharaja of Mysore.

Read—

Order Thereon—No. 520 (1)

Government direct that the accompanying copy of the revised index on the Official Trustees office, Madras, be printed

1

In the Mysore Gazette, both in English & in Kannada parts, for general information ~~of the Public~~

D 28/6 For Chief Secretary.

To

The Compiler, Mysore Gazette, with a copy each of the Revised rates in English & Kannada

KR
17/6/1920
AD 28/6

List of enclosures.

Copied by

Examined by

WD 1744—GPB —30,000 —17-3 1(*